ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 141 RNI Number : KNKAN/25/A2770 30-05-2026 Saturday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :141 ರಾಯಚೂರು 30-05-2026 ಶನಿವಾರ ಪುಟ 04 ಬೆಲೆ ರೂ.2/- ಮೊ:8660146563

ಸರ್ಕಾರ ರಚನೆ ಕುರಿತು ದೆಹಲಿಯಲ್ಲಿ ಕಾರ್ಯತಂತ್ರ

ಬೆಂಗಳೂರು, ಮೇ 29-

ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ನೀಡಿದ್ದ ರಾಜೀನಾಮೆ ಅಂಗೀಕಾರಗೊಂಡು, ಸಚಿವ ಸಂಪುಟವೂ ವಿಸರ್ಜನೆಗೊಂಡ ಬಳಿಕ ಹೊಸ ಸರ್ಕಾರ ರಚನೆಗೆ ದೆಹಲಿಯಲ್ಲಿ ಕಸರತ್ತು ಆರಂಭವಾಗಿವೆ. ಇತ್ತ ಬೆಂಗಳೂರಿನಲ್ಲಿಯೂ ಶಾಸಕಾಂಗ ಸಭೆಯ ತಯಾರಿ ನಡೆಯುತ್ತಿದೆ.

ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಂಭವನೀಯ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಬ್ಬರೂ ಪ್ರತ್ಯೇಕವಾಗಿ ದೆಹಲಿ ತಲುಪಿದ್ದು, ತಮದೇ ಆದ ಕಾರ್ಯತಂತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮೂಲಗಳ ಪ್ರಕಾರ ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದ ಡಾ.ಜಿ.ಪರಮೇಶ್ವರ್, ಕೆ.ಜೆ.ಜಾರ್ಜ್, ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಎಚ್.ಕೆ.ಪಾಟೀಲ್, ಕೃಷ್ಣಭೈರೇಗೌಡ, ಚೆಲುವರಾಯ ಸ್ವಾಮಿ, ಈಶ್ವರ್ ಖಂಡ್ರೆ, ಶಿವರಾಜ ತಂಗಡಗಿ, ಲಕ್ಷ್ಮೀ ಹೆಬ್ಬಾಳ್ಕರ್, ಮಧುಬಂಗಾರಪ್ಪ, ಡಾ.ಎಂ.ಸಿ. ಸುಧಾಕರ್ ಅವರುಗಳು ಮುಂದುವರೆಯಲಿದ್ದಾರೆ ಎನ್ನಲಾಗುತ್ತಿದೆ.

ಕೆ.ಎಚ್.ಮುನಿಯಪ್ಪ ಅವರ ಬದಲಾಗಿ ಅವರ ಪುತ್ರಿ ರೂಪಾಕಲಾ ಅವರಿಗೆ ಸಚಿವ ಸ್ಥಾನ ಸಿಗುವ ಸಾಧ್ಯತೆ ಇದೆ. ಎಂ.ಬಿ.ಪಾಟೀಲ್, ಜಮೀರ್ ಅಹಮದ್ ಖಾನ್, ಕೆ.ವೆಂಕಟೇಶ್, ಡಾ. ಎಚ್.ಸಿ. ಮಹದೇವಪ್ಪ, ದಿನೇಶ್ ಗುಂಡೂರಾವ್, ಶರಣಬಸಪ್ಪ ದರ್ಶನಾಪೂರ್, ಶಿವಾನಂದ ಪಾಟೀಲ್, ಆರ್.ಬಿ.ತಿಮ್ಮಾಪೂರ್, ಎಸ್.ಎಸ್. ಮಲ್ಲಿಕಾರ್ಜುನ್, ಡಾ. ಶರಣ ಪ್ರಕಾಶ್‌ಪಾಟೀಲ್, ರಹೀಂಖಾನ್ ಸೇರಿದಂತೆ ಇನ್ನೂ ಕೆಲವರು ಅವಕಾಶ ವಂಚಿತರಾಗಲಿದ್ದಾರೆ ಎಂದು ತಿಳಿದು ಬಂದಿದೆ.

ಕೆ.ಎನ್. ರಾಜಣ್ಣ, ಬಿ.ನಾಗೇಂದ್ರ ಈಗಾಗಲೇ ರಾಜೀನಾಮೆ ನೀಡಿದ್ದಾರೆ. ಡಿ.ಸುಧಾಕರ್ ಅಕಾಲಿಕ ನಿಧನವಾಗಿದ್ದಾರೆ. ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಸಂಪುಟ ಸೇರ್ಪಡೆಯಾಗುವ ಸಾಧ್ಯತೆ ಇದ್ದು, ರಾಮಲಿಂಗಾರೆಡ್ಡಿ, ಹೆಚ್.ಸಿ. ಮಹಾದೇವಪ್ಪ, ದಿನೇಶ್ ಗುಂಡೂರಾವ್, ಟಿ.ಬಿ. ಜಯಚಂದ್ರ, ಆರ್.ವಿ.ದೇಶಪಾಂಡೆ ಅವರ ಹೆಸರುಗಳು ಸಭಾಧ್ಯಕ್ಷ ಸ್ಥಾನಕ್ಕೆ ಕೇಳಿ ಬಂದಿವೆ.

ನಾಲ್ಕು ಉಪ ಮುಖ್ಯಮಂತ್ರಿ ಹುದ್ದೆಗಳ ಸೃಷ್ಟಿಗೆ ಸಿದ್ದರಾಮಯ್ಯ ಪಟ್ಟು ಹಿಡಿದಿದ್ದಾರೆ. ಆದರೆ ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿಗಳ ಹುದ್ದೆ ಬೇಡ ಎಂದು ಹಠ ಹಿಡಿದಿರುವುದಾಗಿ ತಿಳಿದು ಬಂದಿದೆ.

ಸಂಜೆಯ ವೇಳೆಗೆ ಸ್ಪಷ್ಟತೆ:

ಇಂದು ಮಧ್ಯಾಹ್ನದವರೆಗೂ ದೆಹಲಿಯಲ್ಲಿ ನಡೆಯಲಿರುವ ಹಗ್ಗಾ-ಜಗ್ಗಾಟ ಸಂಜೆಯ ವೇಳೆಗೆ ಒಂದು ಹಂತಕ್ಕೆ ಬರಲಿದೆ.ಸಿದ್ದರಾಮಯ್ಯ ಅವರು, ಹೈಕಮಾಂಡ್ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಕೆ.ಸಿ.ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿ, ಕೃತಜ್ಞತೆ ಸಲ್ಲಿಸುವ ಜೊತೆಗೆ ತಮ ಬೆಂಬಲಿಗರ ಹಿತರಕ್ಷಣೆ ಕುರಿತು ಮಹತ್ವದ ಚರ್ಚೆ ನಡೆಸಿದ್ದಾರೆ.

ಡಿ.ಕೆ.ಶಿವಕುಮಾರ್ ಅವರು ದೆಹಲಿಯಲ್ಲಿ ಕರ್ನಾಟಕ ಭವನ ಅಥವಾ ತಮ ಖಾಸಗಿ ನಿವಾಸದಲ್ಲಿ ಇರದೇ ರಹಸ್ಯ ಸ್ಥಳದಲ್ಲಿದ್ದು, ಸಂಪುಟ ರಚನೆಯ ಬಗ್ಗೆ ವರಿಷ್ಠ ನಾಯಕರೊಂದಿಗೆ ಚರ್ಚೆ ನಡೆಸುತ್ತಿರುವುದು ಕಂಡು ಬಂದಿದೆ.

ಶಾಸಕಾಂಗ ಸಭೆಗೆ ತಯಾರಿ:

ಇತ್ತ ಬೆಂಗಳೂರಿನಲ್ಲಿ ನಾಳೆ ಶಾಸಕಾಂಗ ಪಕ್ಷದ ಸಭೆ ನಡೆಸಲು ತಯಾರಿಗಳಾಗುತ್ತಿವೆ. ಶಾಸಕಾಂಗ ಸಭೆಯ ಬಳಿಕ ನಾಳೆಯೇ ಡಿ.ಕೆ.ಶಿವಕುಮಾರ್ ಅವರು, ರಾಜ್ಯಪಾಲರನ್ನು ಭೇಟಿ ಮಾಡಿ, ಸರ್ಕಾರ ರಚನೆಯ ಹಕ್ಕು ಪ್ರತಿಪಾದಿಸುವ ಸಾಧ್ಯತೆ ಇದೆ. ನಂತರ ಭಾನುವಾರ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಜೊತೆಗೆ 15 ಮಂದಿ ಸಚಿವರಾಗುವ ಸಾಧ್ಯತೆಗಳಿವೆ.

ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಸಚಿವರಾಗಿದ್ದ ಬಹಳಷ್ಟು ಜನರಿಗೆ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಸಚಿವರಾಗುವ ಅವಕಾಶ ಸಿಗುವುದು ಅನುಮಾನಾಸ್ಪದವಾಗಿದೆ. ಹೀಗಾಗಿ ಕೆಲವರು ದೆಹಲಿಯಲ್ಲಿ ಬೀಡುಬಿಟ್ಟು ಅವಕಾಶ ಗಿಟ್ಟಿಸಿಕೊಳ್ಳಲು ಯತ್ನಿಸುತ್ತಿದ್ದಾರೆ.

3 ನೇ ಪುಟಕ್ಕೆ

ಪ್ರೀತಿ ತ್ಯಾಗ ಸೌಹಾರ್ದತೆ ಮತ್ತು ಸಹೋದರತ್ವದ ಸಂದೇಶ ಸಾರುವ ಪವಿತ್ರ ಹಬ್ಬ. ಈದ್ ಉಲ್ ಆದಾ. (ಬಕ್ರೀದ್)ಅಲಂಬಾಷಾ ಖಾದ್ರಿ

ಸಿಂಧನೂರು,ಮೇ.29-

ಇತ್ತೀಚಿಗೆ ಸುರಿದ ಮಳೆಯಿಂದಾಗಿ ಈದ್ಗಾ ಮೈದಾನ ಕೆಸರುಮಯವಾಗಿದ್ದರಿಂದ. ನಗರದ ಮುಸ್ಲಿಂ ಬಾಂಧವರು ತಮ್ಮ ತಮ್ಮ ಬಡಾವಣೆಗಳ ಮಸೀದಿಗಳಲ್ಲಿ ಬಕ್ರೀದ್ ಹಬ್ಬದ ನಮಾಜನ್ನು ಸಾಂಕೇತಿಕವಾಗಿ ಸಾಮೂಹಿಕವಾಗಿ ನಿರ್ವಹಿಸಿದರು. ನಗರದ ಕೋಟೆ ಏರಿಯಾದ ಜಾಮಿಯಾನ್ ಮಸೀದ್ ನಲ್ಲಿ. ಮೌಲಾನ ಸೈಯದ್ ಆಲಂ ಭಾಷಾ ಖಾ ದ್ರಿ ಇವರ ನೇತೃತ್ವದಲ್ಲಿ. ಬಡಾವಣೆಯ ನಿವಾಸಿಗಳು ಸಾಮೂಹಿಕವಾಗಿ ಬಕ್ರೀದ್ ಹಬ್ಬದ ನಮಾಜ್ ನಿರ್ವಹಿಸಿದರು. ನಮಾಜಿನ ಮುಂಚೆ ಖುತಬಾ ಪಠಣೆ ಮಾಡಿದ ಆಲಂಬಾಷ ಅವರು. ಇದುಲ್ ಅದಾ. (ಬಕ್ರೀದ್) ತ್ಯಾಗ ಪ್ರೀತಿ ಸೌಹಾರ್ದತೆ ಮತ್ತು ಸಹೋದರತ್ವದ ಸಂದೇಶ ಸಾರುವ ಈ ಪವಿತ್ರ ಹಬ್ಬವು ದೇಶದ ಜನರಿಗೆ ಸಮೃದ್ಧಿ ಹಾಗೂ ನೆಮ್ಮದಿಯನ್ನು ತರಲಿ ಎಂದು ಪ್ರಾರ್ಥಿಸಿದರು. ನಂತರ ಬಯಾನ್ ನಲ್ಲಿ ಬಕ್ರೀದ್ ಹಬ್ಬದ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸಿದರು. ಬಕ್ರೀದ್. (ಇದ್ ಉಲ್ ಆದಾ) ಹಬ್ಬದ ಇತಿಹಾಸವು ಪ್ರವಾದಿ ಇಬ್ರಾಹಿಂ ಅಲೆ ಸಲಾಂ



ಅವರ ಅಚಲ ಭಕ್ತಿ ಮತ್ತು ದೇವರ ಮೇಲಿನ ನಂಬಿಕೆ ಸಂಬಂಧಿಸಿದ. ದೇವರ ಆದೇಶದ ಮೇರೆಗೆ ತನ್ನ ಅತ್ಯಂತ ಪ್ರೀತಿಯ ಮಗನನ್ನೇ ತ್ಯಾಗ ಮಾಡಲು ಸಿದ್ದರಾದ ಅವರ ಅಚಲನ ನಂಬಿಕೆ ಮನೋಭಾವ ಮಾನವ ಇತಿಹಾಸದಲ್ಲಿ ಮಹಾನ್ ಆದರ್ಶವಾಗಿದೆ. ದೇವರು ಅವರ ಅಪಾರವಾದ ಭಕ್ತಿಯನ್ನು ಮೆಚ್ಚಿ ಪುತ್ರನ ಬದಲು ಪ್ರಾಣಿಯನ್ನು ಬಲಿಯಾಗಿ ನೀಡುವಂತೆ ಮಾಡಿದ ಪ್ರಸಂಗ ಈ ಹಬ್ಬದ ಮೂಲವಾಗಿದೆ. ದೇವರಿಗೆ ಬೇಕಾಗಿರುವುದು ಮನುಷ್ಯನ ಶುದ್ಧ ಹೃದಯ ನಿಷ್ಠೆ. ಮತ್ತು ಭಕ್ತಿ.ಕರುಣೆ. ಎಂಬುವುದು ಅವರ ಅಂತರಾಳದ ಸತ್ಯ. ಬಕ್ರೀದ್ ಹಬ್ಬದ ಪ್ರಮುಖ ಸಂದೇಶವೇ ತ್ಯಾಗ ಮತ್ತು

3 ನೇ ಪುಟಕ್ಕೆ

ನಿರಾಶ್ರಿತರಿಗೆ ಹೊಸ ಜೀವದ ಆಶ್ರಯ ನೀಡಿದ ಕಾರುಣ್ಯ ಆಶ್ರಮ ಸೇವಾ ಟ್ರಸ್ಟ್

ಸಿಂಧನೂರು,ಮೇ.29-

ಮಾನವ ಜೀವನದಲ್ಲಿ ಕೆಲವೊಮ್ಮೆ ಒಂದು ಮಾತು, ಒಂದು ಸ್ಪರ್ಶ, ಒಂದು ನೆರವು ಕೂಡ ಬದುಕಿನ ದಿಕ್ಕನ್ನೇ ಬದಲಾಯಿಸಬಹುದು. ಸಮಾಜದಲ್ಲಿ ಅನೇಕರು ಮನೆ ಇದ್ದರೂ ಮನಸ್ಸಿಗೆ ಆಶ್ರಯವಿಲ್ಲದೆ ಬದುಕುತ್ತಿದ್ದಾರೆ. ಕೆಲವರು ಕುಟುಂಬದಿಂದ ದೂರವಾ ಗಿದ್ದಾರೆ, ಕೆಲವರು ವೃದ್ಧಾಪ್ಯದಲ್ಲಿ ನಿರ್ಲಕ್ಷ್ಯಕ್ಕೊಳಗಾಗಿದ್ದಾರೆ, ಇನ್ನೂ ಕೆಲವರು ದೈಹಿಕ ಮತ್ತು ಮಾನಸಿಕ ಸಂಕಷ್ಟಗಳಿಂದ ಜೀವನವೇ ಕತ್ತಲಾಗಿದೆಯೆಂದು ಭಾವಿಸು ತ್ತಿದ್ದಾರೆ.



ಅಂತಹ ಅನೇಕ ಜೀವಗಳಿಗೆ ಹೊಸ ಬೆಳಕಾಗಿ, ಹೊಸ ನಂಬಿಕೆಯಾಗಿಯೂ, ಬದುಕಿನ ಆಶಾಕಿರಣವಾಗಿಯೂ ಬೆಳಗುತ್ತಿರುವ ಸಂಸ್ಥೆ ಕಾರುಣ್ಯ ಆಶ್ರಮ ಸೇವಾ ಟ್ರಸ್ಟ್, ಸಿಂಧನೂರು.

ಈ ಆಶ್ರಮವು ಕೇವಲ ಒಂದು ಸೇವಾ ಸಂಸ್ಥೆಯಲ್ಲ; ಇದು ಕರುಣೆ, ಪ್ರೀತಿ, ಮಾನವೀಯತೆ ಮತ್ತು ಸೇವೆಯ ಜೀವಂತ ರೂಪವಾಗಿದೆ. ಸಮಾಜದಲ್ಲಿ ಯಾರೂ ನಮ್ಮವರು ಇಲ್ಲ ಅಂದುಕೊಳ್ಳುವ ಅನೇಕ ಜನರಿಗೆ ''ನಾವು ಇದ್ದೇವೆ'' ಎಂದು ಹೇಳುವ ಒಂದು ದೊಡ್ಡ ಕುಟುಂಬವಾಗಿದೆ. ಈ ಮಹಾನ್ ಕಾರ್ಯದ ಹಿಂದೆ ಇರುವ ಪ್ರೇರಣಾಶಕ್ತಿ ಎಂದರೆ ಸಮಾಜಸೇವಕ ಹಾಗೂ ಆಧ್ಯಾತ್ಮಿಕ ಚಿಂತಕರಾದ ಚನ್ನಬಸವ ಸ್ವಾಮಿ ಹಿರೇಮಠ ಅವರ ಮಾರ್ಗದರ್ಶನ.

ಕಾರುಣ್ಯ ಆಶ್ರಮದಲ್ಲಿ ಯಾರಿಗೂ ಕೇವಲ ಊಟ ಮತ್ತು ವಸತಿ ಮಾತ್ರ ನೀಡುವುದಿಲ್ಲ. ಇಲ್ಲಿ ಮಾನವೀಯತೆಯ ಸ್ಪರ್ಶ ದೊರೆಯುತ್ತದೆ. ಪ್ರತಿಯೊಬ್ಬರ ನೋವನ್ನು ತಮ್ಮದೇ ನೋವಂತೆ ಅರ್ಥಮಾಡಿಕೊಳ್ಳುವ ಮನಸ್ಸು ಚನ್ನಬಸವ ಸ್ವಾಮಿ ಹಿರೇಮಠ .

ತಮ್ಮ ಜೀವನದ ಕೊನೆಯ ದಿನಗಳನ್ನು ಗೌರವದಿಂದ ಕಳೆಯುತ್ತಿದ್ದಾರೆ. ಮಾನಸಿಕವಾಗಿ ಕುಗ್ಗಿದವರು ಇಲ್ಲಿ ಮತ್ತೆ ಆತ್ಮವಿಶ್ವಾಸವನ್ನು ಪಡೆದುಕೊಳ್ಳುತ್ತಿದ್ದಾರೆ.

ಚನ್ನಬಸವ ಸ್ವಾಮಿ ಹಿರೇಮಠರ ಸೇವಾ ಮನೋಭಾವ: ಚನ್ನಬಸವ ಸ್ವಾಮಿ ಹಿರೇಮಠ ಅವರ ಚಿಂತನೆಗಳಲ್ಲಿ ದಯೆ ಮತ್ತು ಮಾನವೀಯತೆ ತುಂಬಿಕೊಂಡಿವೆ. ''ಸಮಾಜದಲ್ಲಿ ಯಾರೂ ಅನಾಥರಲ್ಲ'' ಎಂಬ ಸಂದೇಶವನ್ನು ಅವರು ತಮ್ಮ ಕಾರ್ಯಗಳ ಮೂಲಕ ಸಾರುತ್ತಿದ್ದಾರೆ. ಆಶ್ರಮಕ್ಕೆ ಬರುವ ಪ್ರತಿಯೊಬ್ಬರಿಗೂ ಕುಟುಂಬದ ಸದಸ್ಯರಂತೆ ಗೌರವ ನೀಡುವುದು ಅವರ ವಿಶೇಷತೆ.

ಅವರ ಮಾರ್ಗದರ್ಶನದಲ್ಲಿ

3 ನೇ ಪುಟಕ್ಕೆ

ಮುಟ್ಟು ಸಹಜ ಪ್ರಕ್ರಿಯೆ ಕಳಂಕವಲ್ಲ.ಡಾ ಅಯ್ಯನಗೌಡ

ಸಾಂಕ್ರಾಮಿಕ ರೋಗಗಳ ತಪಾಸಣೆ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ

ಸಿಂಧನೂರು,ಮೇ.29-

ಮುಟ್ಟು ಸಹಜ ಪ್ರಕ್ರಿಯೆ ಕಳಂಕವಲ್ಲ ಡಾಕ್ಟರ್ ಅಯ್ಯನ್ ಗೌಡ ತಾಲೂಕ ಆರೋಗ್ಯ ಅಧಿಕಾರಿಗಳು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಮತ್ತು ತಾಲೂಕು ಸಾರ್ವಜನಿಕ ಆಸ್ಪತ್ರೆ ಸಿಂಧನೂರು ಹಾಗೂ ಸನ್ ರೈಸ್ ಕಾಲೇಜು ಸಿಂಧನೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಇಂದು ವಿಶ್ವ ಋತು ಚಕ್ರ ನೈರ್ಮಲ್ಯ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು ಈ ಕಾರ್ಯಕ್ರಮದಲ್ಲಿ ತಾಲೂಕ ಆರೋಗ್ಯ ಅಧಿಕಾರಿಗಳು ಡಾಕ್ಟರ್ ಅಯ್ಯನಗೌಡ ಇವರುಗಳು ಸನ್ ರೈಸ್ ಕಾಲೇಜಿನ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹಾಗೂ ತಾಲೂಕಿನ ಮಹಿಳೆಯರ ಆರೋಗ್ಯವನ್ನು ಉದ್ದೇಶ ಉದ್ದೇಶಿಸಿ ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮದ ಅಡಿಯಲ್ಲಿ ನಡೆಯುತ್ತಿರುವ ವಿಶ್ವ ಋತು ಚಕ್ರ ನೈರ್ಮಲ್ಯ ದಿನಾಚರಣೆಯ ಕಾರ್ಯಕ್ರಮವನ್ನು ಮುಟ್ಟಿನ ಸ್ನೇಹಿತ ಪ್ರಪಂಚಕ್ಕಾಗಿ ಎಲ್ಲರೂ ಒಗ್ಗೋಣ ಎಂಬ ಘೋಷವಾಕ್ಯವನ್ನು ಹೇಳುತ್ತಾ ಮಹಿಳೆಯರಿಗೆ ಮತ್ತು ಕಾಲೇಜಿನ ವಿದ್ಯಾರ್ಥಿಗಳಿಗೆ ಪೌಷ್ಟಿಕ ಆಹಾರ ಸೇವನೆ ಬಗ್ಗೆ, ಋತುಚಕ್ರ ನೈರ್ಮಲ್ಯದ ಅರಿವು ಮತ್ತು ಜಾಗೃತಿ ಕುರಿತು ತಿಳಿಸುವುದರ ಜೊತೆಗೆ ಮಹಿಳೆಯರಲ್ಲಿ ಇರತಕ್ಕಂತ ಋತುಚಕ್ರ



ಸಂಬಂಧಿ ಸಮಸ್ಯೆಗಳ ಗೊಂದಲಗಳ ನಿವಾರಣೆಯ ಕುರಿತು ಆರೋಗ್ಯ ಜಾಗೃತಿಯನ್ನು ಮಾಡಿಸಿದರು.

ನಂತರ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ದ ಅಡಿಯಲ್ಲಿನ ಸ್ಕಿಜೋ ಪ್ರೀನೀಯ ಕಾಯಿಲೆ ಕುರಿತು ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ದೈಹಿಕ ಆರೋಗ್ಯದ ಜೊತೆ ಜೊತೆಗೆ ಮಾನಸಿಕ ಆರೋಗ್ಯ ಸದೃಢತೆಯನ್ನು ಕಾಪಾಡಿಕೊಳ್ಳುವಲ್ಲಿ ಕಾಳಜಿ ಮತ್ತು ಗಮನ ಹರಿಸಬೇಕೆಂದು ತೋರಿಸಬೇಕೆಂದು ತಿಳಿಸಿದರು.

ನಂತರ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಸಮಾಲೋಚಕರಾದ ಶ್ರೀ ಅರುಣ್ ಕುಮಾರ್ ಕೆ ಅವರು ಜಿಲ್ಲಾ ಮಾನಸಿಕ ಆರೋಗ್ಯದ ಕಾರ್ಯಕ್ರಮದ ಸೇವಾ ಸೌಲಭ್ಯಗಳ ಕುರಿತು ಹಾಗೂ ಮಾನಸಿಕ ಆರೋಗ್ಯ ಸಂಬಂಧಿಸಿದ ಸಮಸ್ಯೆಗಳ ಕುರಿತು ಮತ್ತು ಅವುಗಳ ನಿವಾರಣ ಮಾರ್ಗಗಳ ಕುರಿತು ಸಂಪೂರ್ಣವಾಗಿ ವಿವರಿಸಿದರು.

ನಂತರ ತಾಲೂಕ ವಿ ಬಿ ಡಿ ಟಿ ಎಸ್ ಮೇಲ್ವಿಚಾರಕರಾದ ಶ್ರೀ ಎಫ್ ಈ ಹಣಗಿ ಯವರು ಮಾನ್ಸೂನ್ ಮಳೆಗೆ ಆಗುವಂತೆ ಸಾಂಕ್ರಾಮಿಕ ರೋಗಗಳ ಕುರಿತು, ಜಾಗೃತ ವಹಿಸಬೇಕಾದ ಮಾಹಿತಿಯ ಕುರಿತು ಮತ್ತು ಹಲವಾರು ಸಾಂಕ್ರಾಮಿಕ ರೋಗಗಳ ತಪಾಸಣೆ ಕುರಿತಾಗಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿದರು.

3 ನೇ ಪುಟಕ್ಕೆ



ಪಿಣರಾಯಿ ವಿಜಯನ್ ನಿವಾಸದ ಮೇಲೆ ಇ.ಡಿ ದಾಳಿ ಖಂಡಿಸಿ ಸಿಪಿಐ(ಎಂ) ಪ್ರತಿಭಟನೆ

ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ರಾಜಕೀಯ ಆಯುಧವಾಗಿ ಬಳಸುತ್ತಿದೆ: ಕೆ.ಜಿ.ವಿರೇಶ

ರಾಯಚೂರು, ಮೇ.29-

ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯರಾದ ಅವರ ನಿವಾಸದ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ.) ನಡೆಸಿದ ದಾಳಿಯನ್ನು ಖಂಡಿಸಿ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸಿಪಿಐ(ಎಂ) ರಾಯಚೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಗರದ ಟಿಪ್ಪು ಸುಲ್ತಾನ್ ಗಾರ್ಡನ್ ಹತ್ತಿರ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾರ್ಯದರ್ಶಿ ಕೆ.ಜಿ. ವಿರೇಶ ಅವರು, ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಇ.ಡಿ. ರಾಜಕೀಯ ಪ್ರತೀಕಾರದ ಭಾಗವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಆರೋಪಿಸಿದರು. ಎಕ್ಸಾಲಾಜಿಕ್ ಪ್ರಕರಣಕ್ಕೂ ಪಿಣರಾಯಿ ವಿಜಯನ್ ಅವರಿಗೂ ಯಾವುದೇ ನೇರ ಸಂಬಂಧ ಇಲ್ಲವೆಂದು ನ್ಯಾಯಾಲಯಗಳು ಹಲವು ಬಾರಿ ಹೇಳಿದ್ದರೂ, ಅವರನ್ನು ರಾಜಕೀಯವಾಗಿ ಗುರಿಯಾಗಿಸಲಾಗುತ್ತಿದೆ ಎಂದು ಟೀಕಿಸಿದರು.


ದಿಲ್ಲಿಯಲ್ಲಿ ಇ.ಡಿ. ಕಚೇರಿ ಎದುರು ಪ್ರತಿಭಟನೆ ನಡೆಸಿದ

3 ನೇ ಪುಟಕ್ಕೆ

ಹಿಂದುಳಿದವರ ಪಾಲಿಗೆ ಶ್ರೀರಕ್ಷೆ, ಧೀಮಂತ ನಾಯಕ ಸಿದ್ದರಾಮಯ್ಯ: ಕೆ.ಶಿವನಗೌಡ ನಾಯಕ

ರಾಯಚೂರು,ಮೇ.28-

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ವೈಯಕ್ತಿಕವಾಗಿ ಹಾಗೂ ರಾಜ್ಯದ ಅಹಿಂದ ವರ್ಗಗಳ ಪರ ಹೋರಾಟ ನಡೆಸಿದ ಜನನಾಯಕನ ನಿರ್ಗಮನ ನನಗೆ ತುಂಬಾ ದುಃಖ ತಂದಿದೆ ಎಂದು ಜಿಲ್ಲೆಯ ಮಾಜಿ ಸಚಿವ ಕೆ.ಶಿವನಗೌಡ ನಾಯಕ ಅವರು ಕಳವಳ ವ್ಯಕ್ತಪಡಿಸಿದ್ದಾರೆ.



ಅವರು ಗುರುವಾರ ರಾಯಚೂರು ಬೆಳಕು ಪತ್ರಿಕೆಯೊಂದಿಗೆ ಮಾತನಾಡಿ, ಕರ್ನಾಟಕದ ನನಗೂ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರೊಂದಿಗೆ 2008 ರಿಂದ ಆತ್ಮೀಯ ಪರಿಚಯವಿದೆ. ನಾವು ರಾಜಕೀಯವಾಗಿ ಬೇರೆ ಬೇರೆ ಪಕ್ಷಗಳಲ್ಲಿ ಇದ್ದರೂ ಸಹ ಅವರು ಎಂದಿಗೂ ಪಕ್ಷಭೇದವನ್ನು ಮಾಡದೆ ಆತ್ಮೀಯತೆ ಮತ್ತು ಗೌರವದಿಂದ ನಡೆದುಕೊಳ್ಳುತ್ತಿದ್ದರು. ಅಭಿವೃದ್ಧಿ ವಿಚಾರಗಳು, ಜನಸಾಮಾನ್ಯರ ಸಮಸ್ಯೆಗಳು ಹಾಗೂ ಕುಶಲೋಪರಿ ವಿಷಯಗಳಲ್ಲಿ ಉತ್ತಮ ಸಂಬಂಧವನ್ನು ಉಳಿಸಿಕೊಂಡಿದ್ದರು.

ಅವರ ಹುಟ್ಟು ಹಬ್ಬಕ್ಕೆ ನಾನು ಅಪರೂಪವಾದ ಕಾಣಿಕೆ ನೀಡಿದ್ದಾಗ ಅವರು ನಸು ನಕ್ಕು ಅಪ್ಪುಗೆ ನೀಡಿದ್ದು ಇಂದಿಗೂ ನನಗೆ ಕಣ್ಣ ಮುಂದಿದೆ ಅಂತಹ ಸರಳ ಹಾಗೂ ಸೌಮ್ಯ ಸ್ವಭಾವದ ವ್ಯಕ್ತಿತ್ವ ಅವರದು.

ಡಾ. ಬಿ.ಆರ್. ಅಂಬೇಡ್ಕರ ಬಸವಣ್ಣ ಹಾಗೂ ಬುದ್ದರ ತತ್ವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಆಡಳಿತ ನಡೆಸಿದ ಅಪರೂಪದ ರಾಜಕೀಯ ನಾಯಕ.



ಹಾಲುಮತ ಸಮಾಜದಲ್ಲಿ ಜನಿಸಿದರು ಸಹ ಸಮಾಜದಲ್ಲಿನ ಸರ್ವ ಸಮುದಾಯಗಳ ಪ್ರೀತಿಗಳಿಸಿದ ಅಪರೂಪದ ಜನನಾಯಕ.


ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ವರ್ಗಗಳ ಜನರನ್ನು ಒಟ್ಟಿಗೆ ಕರೆದುಕೊಂಡು ಹೋಗುವ ದೊಡ್ಡ ಗುಣವನ್ನು ಹೊಂದಿದ್ದರು. ರಾಜ್ಯದಲ್ಲಿ ಅಹಿಂದ ರಾಜಕಾರಣಕ್ಕೆ ಹೊಸ ದಿಕ್ಕು ನೀಡಿದ ನಾಯಕರೆಂದರೆ ಅದು ಸಿದ್ದರಾಮಯ್ಯನವರು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹಾಲುಮತ ಸಮಾಜದಲ್ಲಿ ಜನಿಸಿದರೂ ಎಲ್ಲಾ ಸಮುದಾಯಗಳ ವಿಶ್ವಾಸ ಗಳಿಸಿ ರಾಜ್ಯದ ಜನನಾಯಕನಾಗಿ ಬೆಳೆದವರು. ಅವರು ಮುಖ್ಯಮಂತ್ರಿ ಸ್ಥಾನದಲ್ಲಿದ್ದ ಅವಧಿಯಲ್ಲಿ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ಬಡವರು ಮತ್ತು ಶೋಷಿತರ ಪರ ಕೆಲಸ ಮಾಡಿದರು. ನುಡಿದಂತೆ ನಡೆಯುವ ರಾಜಕಾರಣಿ ಎಂಬ ಹೆಗ್ಗಳಿಕೆಯನ್ನು ತಮ್ಮ ರಾಜಕೀಯ ಜೀವನದಲ್ಲಿ ಉಳಿಸಿಕೊಂಡಿದ್ದಾರೆ.

3 ನೇ ಪುಟಕ್ಕೆ

ಫೋನ್ ಪೇ ವಂಚನೆ ಜಾಲಕ್ಕೆ ಬಲಿಯಾದ ಸಿಎಸ್‌ಸಿ ಕೇಂದ್ರಗಳು?

ಖಾತೆ ಫ್ರೀಜ್; ಪೊಲೀಸರ ಕಿರುಕುಳ ಆರೋಪ



ರಾಯಚೂರು, ಮೇ.29-

ಅರಕೇರಾ ಹಾಗೂ ಮಲೆ ದೇವರಗುಡ್ಡ ಗ್ರಾಮಗಳ CSC, CSP ಮತ್ತು ಕಂಪ್ಯೂಟರ್ ಕೇಂದ್ರಗಳನ್ನು ಗುರಿಯಾಗಿಸಿಕೊಂಡು ನಡೆದಿರುವ ಅಂತರರಾಜ್ಯ ಫೋನ್? ಪೇ ವಂಚನೆ ಜಾಲದ ಬಗ್ಗೆ ಗಂಭೀರ ಆರೋಪಗಳು ಕೇಳಿಬಂದಿವೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮೂಲಕ ಲಕ್ಷಾಂತರ ರೂಪಾಯಿ ವರ್ಗಾವಣೆ ಮಾಡಿ ಬಳಿಕ ಖಾತೆಗಳನ್ನು ಫ್ರೀಜ್ ಮಾಡಿಸಿರುವ ಆರೋಪದ ಜೊತೆಗೆ, ಸಂತ್ರಸ್ತರ ಮೇಲೆಯೇ ಪೊಲೀಸ್ ಒತ್ತಡ ಮತ್ತು ಬೆದರಿಕೆ ನಡೆಯುತ್ತಿದೆ ಎಂಬ ದೂರುಗಳು ಬೆಳಕಿಗೆ ಬಂದಿವೆ.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಜಿ. ಶರಣಬಸಪ್ಪ, ಮೆಡಿಕಲ್ ಎಮರ್ಜೆನ್ಸಿ ನೆಪ ಹೇಳಿ ಬಂದ ಅಪರಿಚಿತರು ತುರ್ತು ಹಣ ಬೇಕೆಂದು ನಂಬಿಸಿ ವಿವಿಧ CSC ಮತ್ತು CSP ಕೇಂದ್ರಗಳಲ್ಲಿ ಹಣ ವರ್ಗಾವಣೆ ಮಾಡಿದ್ದಾರೆ. ನಂತರ ಅದೇ ಹಣದ ಆಧಾರದಲ್ಲಿ ಖಾತೆಗಳನ್ನು ಫ್ರೀಜ್ ಮಾಡಿಸಿ ನಮಗೇ

3 ನೇ ಪುಟಕ್ಕೆ

ಸಂಡೂರು ಕ್ಷೇತ್ರದಲ್ಲಿ 935.46 ಲಕ್ಷ ರೂ. ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕಿ ಈ ಅನ್ನಪೂರ್ಣ ಚಾಲನೆ

ಸಂಡೂರು/ಬಳ್ಳಾರಿ,ಮೇ.29-

ಸಂಡೂರು ವಿಧಾನಸಭಾ ಕ್ಷೇತ್ರದ ಗ್ರಾಮೀಣ ಭಾಗಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಮತ್ತಷ್ಟು ಉತ್ತೇಜನ ನೀಡುವ ಉದ್ದೇಶದಿಂದ ಶಾಸಕ ಈ. ಅನ್ನಪೂರ್ಣ ಅವರು ವಿವಿಧ ಗ್ರಾಮಗಳಲ್ಲಿ ರಸ್ತೆ, ಸೇತುವೆ, ಶಾಲಾ ಕೊಠಡಿ, ಬಸ್ ನಿಲ್ದಾಣ, ಹೈಮಾಸ್ಟ್ ಲೈಟ್ ಹಾಗೂ ಗ್ರಂಥಾಲಯ ಕಾಮಗಾರಿಗಳ ಭೂಮಿಪೂಜೆ ಮತ್ತು ಉದ್ಘಾಟನಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿರುವ ಶಾಸಕರು, ಶಿಕ್ಷಣ, ರಸ್ತೆ ಸಂಪರ್ಕ, ಸಾರ್ವಜನಿಕ ಸೌಲಭ್ಯಗಳು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅನೇಕ ಯೋಜನೆಗಳಿಗೆ ಚಾಲನೆ ನೀಡಿದರು. ಕಾರ್ಯಕ್ರಮಗಳಲ್ಲಿ ಗ್ರಾಮಸ್ಥರು, ವಿವಿಧ ಇಲಾಖೆಗಳ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ನಿಡುಗುರ್ತಿಯಲ್ಲಿ ಸೇತುವೆ ಹಾಗೂ ರಸ್ತೆ ಅಭಿವೃದ್ಧಿ :

ನಿಡುಗುರ್ತಿ ಗ್ರಾಮದಿಂದ ಸ್ಮಶಾನ ಹಾಗೂ ಯಶವಂತನಗರ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ ಸೇತುವೆ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು. ಲೋಕೋಪಯೋಗಿ ಇಲಾಖೆ ವತಿಯಿಂದ ಸುಮಾರು 70 ಲಕ್ಷ ರೂ. ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

72-ಮಲ್ಲಾಪುರ ಶಾಲೆಗೆ ಹೊಸ ಕೊಠಡಿ :

72-ಮಲ್ಲಾಪುರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ 16.53 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಹೊಸ ಶಾಲಾ ಕೊಠಡಿಯನ್ನು ಉದ್ಘಾಟಿಸಲಾಯಿತು. ಇದೇ ವೇಳೆ ಗ್ರಾಮದಲ್ಲಿ ಚರಂಡಿ ಅವ್ಯವಸ್ಥೆ ಕುರಿತು ಸಾರ್ವಜನಿಕರು ಶಾಸಕರ ಗಮನ ಸೆಳೆದಿದ್ದು, ಕೂಡಲೇ ಸ್ವಚ್ಛತೆಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಂಡಾಪುರದಲ್ಲಿ ಬಸ್ ನಿಲ್ದಾಣ ನಿರ್ಮಾಣ :

ಕೊಂಡಾಪುರ ಗ್ರಾಮದಲ್ಲಿ 10 ಲಕ್ಷ ರೂ. ಅನುದಾನದಡಿ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು. ಗ್ರಾಮಸ್ಥರಿಗೆ ಸುರಕ್ಷಿತ ಹಾಗೂ ಅನುಕೂಲಕರ ಸಾರಿಗೆ ಸೌಲಭ್ಯ ಒದಗಿಸುವುದು ಇದರ ಉದ್ದೇಶವಾಗಿದೆ.

ಗಿರೇನಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ :

ಗಿರೇನಹಳ್ಳಿಯಿಂದ ರಾಷ್ಟ್ರೀಯ ಹೆದ್ದಾರಿ-50 ಸಂಪರ್ಕಿಸುವ ರಸ್ತೆಯ ವಿವಿಧ ಭಾಗಗಳಲ್ಲಿ ಸೇತುವೆ ಅಪ್ರೋಚ್ ರಸ್ತೆ ಹಾಗೂ ಪ್ರೊಟೆಕ್ಷನ್ ವರ್ಕ್ಸ್ ಕಾಮಗಾರಿಗಳಿಗೆ 1.50 ಕೋಟಿ ರೂ. ವೆಚ್ಚದಲ್ಲಿ ಭೂಮಿಪೂಜೆ ನೆರವೇರಿಸಲಾಯಿತು. ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ವತಿಯಿಂದ ಯೋಜನೆ ಕೈಗೆತ್ತಿಕೊಳ್ಳಲಾಗಿದೆ.

ಹುಲಿಕುಂಟೆಯಲ್ಲಿ ಉಪ ಗ್ರಂಥಾಲಯ :



73-ಹುಲಿಕುಂಟೆ ಗ್ರಾಮದಲ್ಲಿ ಜಿಲ್ಲಾ ಪಂಚಾಯತ್ ವತಿಯಿಂದ ನಿರ್ಮಿಸಲಾದ ಉಪ ಗ್ರಂಥಾಲಯ ಕೇಂದ್ರವನ್ನು ಉದ್ಘಾಟಿಸಲಾಯಿತು. ವಿದ್ಯಾರ್ಥಿಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಅಭ್ಯರ್ಥಿಗಳಿಗೆ ಇದು ನೆರವಾಗಲಿದೆ ಎಂದು ತಿಳಿಸಲಾಯಿತು.

ಉತ್ತರಮಲ್ಲೆ ಶಾಲೆಗೆ ಹೊಸ ಕೊಠಡಿ :

ಉತ್ತರಮಲ್ಲೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ 16.53 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಶಾಲಾ ಕೊಠಡಿಯನ್ನು ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಗುರು ಜಗದೀಶ್, ಎಸ್‌ಡಿಎಂಸಿ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಹಲವು ಗ್ರಾಮಗಳಿಗೆ ಹೈಮಾಸ್ಟ್ ಲೈಟ್ :

ನಿಡುಗುರ್ತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ವತಿಯಿಂದ 47.25 ಲಕ್ಷ ರೂ. ವೆಚ್ಚದಲ್ಲಿ ಹೈಮಾಸ್ಟ್ ಲೈಟ್ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಲಾಯಿತು. ಇದರಿಂದ ಗ್ರಾಮೀಣ ಪ್ರದೇಶಗಳಲ್ಲಿ ರಾತ್ರಿ ವೇಳೆ ಬೆಳಕು ಹಾಗೂ ಭದ್ರತಾ ವ್ಯವಸ್ಥೆ ಸುಧಾರಣೆಯಾಗಲಿದೆ.

ಬಂಡ್ರಿಯಲ್ಲಿ ಶಾಲಾ ಅಭಿವೃದ್ಧಿ :

ಬಂಡ್ರಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 99 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ 5 ಶಾಲಾ ಕೊಠಡಿಗಳ ಕಾಮಗಾರಿಯನ್ನು ಉದ್ಘಾಟಿಸಲಾಯಿತು. ಇದೇ ವೇಳೆ ಮತ್ತೊಂದು 99.15 ಲಕ್ಷ ರೂ. ವೆಚ್ಚದ 5 ಹೊಸ ಶಾಲಾ ಕೊಠಡಿಗಳ ನಿರ್ಮಾಣಕ್ಕೂ ಭೂಮಿಪೂಜೆ ನೆರವೇರಿಸಲಾಯಿತು.

ಕೆ.ಗೊಲ್ಲರಹಟ್ಟಿಯಲ್ಲಿ ರಸ್ತೆ ಮತ್ತು ಶಾಲಾ ಕಾಮಗಾರಿ :

ಕೆ.ಗೊಲ್ಲರಹಟ್ಟಿ ಗ್ರಾಮದಿಂದ ಗೋನಾಳ್ ಮೂಲಕ ಬಂಡ್ರಿ ಅಂಕಮ್ಮನಾಳ್ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು. ಜೊತೆಗೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ 58 ಲಕ್ಷ ರೂ. ವೆಚ್ಚದಲ್ಲಿ 4 ಶಾಲಾ ಕೊಠಡಿಗಳ ನಿರ್ಮಾಣಕ್ಕೂ ಚಾಲನೆ ನೀಡಲಾಯಿತು.

ಕೋಡಿಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ :

ಕೋಡಿಹಳ್ಳಿ ಗ್ರಾಮದಿಂದ ಬಂಡ್ರಿ ಗ್ರಾಮದ ಕೆರೆಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಯೋಜನೆಯಡಿ 40 ಲಕ್ಷ ರೂ. ವೆಚ್ಚದಲ್ಲಿ ಭೂಮಿಪೂಜೆ ನೆರವೇರಿಸಲಾಯಿತು.

ಹೆಚ್.ಕೆ ಹಳ್ಳಿಯಲ್ಲಿ 10 ಶಾಲಾ ಕೊಠಡಿಗಳ ಉದ್ಘಾಟನೆ :

ಹೆಚ್.ಕೆ ಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 1.81 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾದ 10 ಶಾಲಾ ಕೊಠಡಿಗಳ ಕಾಮಗಾರಿಯನ್ನು ಉದ್ಘಾಟಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಈ. ಅನ್ನಪೂರ್ಣ ಅವರು, ''ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿ ನಮ್ಮ ಪ್ರಮುಖ ಗುರಿಯಾಗಿದೆ. ರಸ್ತೆ, ಶಿಕ್ಷಣ, ಬೆಳಕು, ಸಾರಿಗೆ ಹಾಗೂ ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿಗೆ ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಕ್ಷೇತ್ರವನ್ನು ಅಭಿವೃದ್ಧಿಪಡಿಸಲಾಗುತ್ತಿದೆ'' ಎಂದು ಹೇಳಿದರು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಡಾ. ಐ.ಆರ್. ಅಕ್ಕಿ, ಸಿಡಿಪಿಒ ನಾಗರಾಜ್, ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಮಡಿಗಿನ ಬಸಪ್ಪ, ಜಯರಾವ್, ವೀರೇಶ್ ಸ್ವಾಮಿ, ಚಟ್ನಿ ಖಾಸಿಂಪೀರ, ಪಿಎಸ್‌ಐ ಮುದ್ದುರಂಗಸ್ವಾಮಿ, ಬಿಆರ್‌ಪಿ ಕಾರ್ತಿಕ್, ಮುಖ್ಯಗುರು ನಾಗಪ್ಪ ಎಂ. ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಬಾಲಕಿಯ ಅನುಮಾನಾಸ್ಪದ ಮೃತ್ಯು ಪ್ರಕರಣ : ಸಿಐಡಿ ತನಿಖೆಗೆ ಆದೇಶ

ಬೀದರ್,ಮೇ.29-

ಜಿಲ್ಲೆಯ ಕಮಲನಗರ್ ತಾಲೂಕಿನ ಬಾಲಕಿಯೊಬ್ಬಳನ್ನು ಹತ್ಯೆ ಮಾಡಲಾಗಿದೆ ಎನ್ನುವ ಪ್ರಕರಣವನ್ನು ಇದೀಗ ಸಿಐಡಿ ತನಿಖೆಗೆ ಒಪ್ಪಿಸಿ ಆದೇಶ ಹೊರಡಿಸಲಾಗಿದೆ.


ಔರಾದ್ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ 352, 351, (2), 108 ಅಡಿಯಲ್ಲಿ ದಾಖಲಾಗಿರುವ ಅಪರಾಧ ಸಂಖ್ಯೆ 53/2026 ರ ಪ್ರಕರಣವನ್ನು ತಕ್ಷಣವೇ ಜಾರಿಗೆ ಬರುವಂತೆ ಹೆಚ್ಚಿನ ತನಿಖೆಗಾಗಿ ಸಿಐಡಿಗೆ ವರ್ಗಾಯಿಸಲಾಗಿದೆ. ಈ ಕುರಿತು ಪೊಲೀಸ್ ಮಹಾನಿರ್ದೇಶಕ ಡಾ. ಎಂ. ಎ. ಸಲೀಂ ಅವರು ಆದೇಶ ಹೊರಡಿಸಿದ್ದಾರೆ.

ಈ ಪ್ರಕರಣದ ತನಿಖೆಯನ್ನು ಸಿಐಡಿ ಗೆ ಒಪ್ಪಿಸಿರುವ ಕಾರಣ, ಬೀದರ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರು ಪ್ರಕರಣಕ್ಕೆ ಸಂಬಂಧಿಸಿದಂತ ತನಿಖಾ ಕಡತಗಳನ್ನು ಸಂಬಂಧಪಟ್ಟ ತನಿಖಾಧಿಕಾರಿ ಅವರ ಮೂಲಕ ಖುದ್ದಾಗಿ ಸಿಐಡಿ ತನಿಖಾಧಿಕಾರಿಗೆ ಹಸ್ತಾಂತರಿಸಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬೆಂಗಳೂರಿನ ಸಿಐಡಿ ವಿಶೇಷ ಘಟಕ ಮತ್ತು ಆರ್ಥಿಕ ಅಪರಾಧಗಳ ವಿಭಾಗದವರು ಈ ಪ್ರಕರಣದ ಹೆಚ್ಚಿನ ತನಿಖೆ ಕೈಗೊಳ್ಳಬೇಕು. ಪ್ರಕರಣ ಪೂರ್ಣಗೊಂಡ ನಂತರ ವಿವರವಾದ ವರದಿ ಕಳುಹಿಸಬೇಕು ಎಂದು ಆದೇಶ ಹೊರಡಿಸಲಾಗಿದೆ.

ರಸಗೊಬ್ಬರ, ಇಂಧನ ಬೆಲೆ ಇಳಿಕೆಗೆ ಕರ್ನಾಟಕ ರಾಜ್ಯ ರೈತ ಸಂಘ ಆಗ್ರಹ

ಕಲಬುರಗಿ,ಮೇ.29-



ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ರಸಗೊಬ್ಬರ ಹಾಗೂ ಇಂಧನದ ಬೆಲೆಯನ್ನು ತಕ್ಷಣ ಇಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಜಿಲ್ಲಾಡಳಿತದ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ನಾಗೇಂದ್ರಪ್ಪ ಥಂಭೆ ಮಾತನಾಡಿ, ದಿನದಿಂದ ದಿನಕ್ಕೆ ರಸಗೊಬ್ಬರ ಮತ್ತು ಇಂಧನದ ಬೆಲೆ ಏರಿಕೆಯಿಂದ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಕೃಷಿ ಚಟುವಟಿಕೆಗಳ ವೆಚ್ಚ ಹೆಚ್ಚಾಗುತ್ತಿರುವ ಹಿನ್ನೆಲೆ ಸರ್ಕಾರ ರೈತರ ಪರವಾದ ಕ್ರಮ ಕೈಗೊಂಡು ಬೆಲೆ ಇಳಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರಮೇಶ ರಾಗಿ, ಮಂಜುಳಾ ಭಜಂತ್ರಿ, ಮಹಾದೇವಿ ಭಜಂತ್ರಿ, ಮಂಜು ಸಿಕೆ, ಸಿದ್ದು ಪಾಟೀಲ, ಕರೆಪ್ಪ ಕಾರಗುಂಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗ್ರಾಮೀಣ ಜನರ ಸಮಸ್ಯೆಗೆ ಸ್ಪಂದಿಸಿ: ಅಧಿಕಾರಿಗಳಿಗೆ ಶಾಸಕ ಕಂದಕೂರ ಸೂಚನೆ

ಯಾದಗಿರಿ,ಮೇ.29-

ಸರ್ಕಾರದಿಂದ ಬಿಡುಗಡೆಯಾಗುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಗ್ರಾಮೀಣ ಭಾಗದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಅಧಿಕಾರಿಗಳು ಮಾಡಬೇಕು ಎಂದು ಶರಣಗೌಡ ಕಂದಕೂರ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುರಮಠಕಲ್ ಕ್ಷೇತ್ರದ ಚಿನ್ನಾಕಾರ್ ಕ್ರಾಸ್ ಬಳಿ ಕೆಕೆಆರ್‌ಡಿಬಿ ಮೈಕ್ರೋ ಸಾಮಾನ್ಯ ಯೋಜನೆಯಡಿ 9.90 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ ನೆರವೇರಿಸಿ ಅವರು ಮಾತನಾಡಿದರು.

ಸಿಂದಗಿ-ಕೊಡಂಗಲ್ ರಾಜ್ಯ ಹೆದ್ದಾರಿ 16ರ ಆಯ್ದ ಭಾಗಗಳಲ್ಲಿ ಮರು ಡಾಂಬರೀಕರಣ, ಗುರಮಠಕಲ್ ಪಟ್ಟಣದ ರಸ್ತೆ ಅಗಲೀಕರಣ, ಸೇತುವೆ ನಿರ್ಮಾಣ, ಪಟ್ಟಣ ಸೌಂದರ್ಯೀಕರಣ ಹಾಗೂ ಆಧುನಿಕ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.

''ಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರದ ಮಟ್ಟದಲ್ಲಿ ಸಾಕಷ್ಟು ಶ್ರಮಪಟ್ಟು ಅನುದಾನ ತರುತ್ತೇವೆ. ಅದು ಜನರಿಗೆ ಪ್ರಯೋಜನವಾಗುವ ರೀತಿಯಲ್ಲಿ ಬಳಸಿದಾಗ ಮಾತ್ರ ನಮ್ಮ ಶ್ರಮ ಸಾರ್ಥಕವಾಗುತ್ತದೆ,''



ಎಂದು ಶಾಸಕ ಕಂದಕೂರ ಹೇಳಿದರು.

ಈ ರಸ್ತೆ ಹೈದರಾಬಾದ್ ಸಂಪರ್ಕಿಸುವ ಪ್ರಮುಖ ಮಾರ್ಗವಾಗಿದ್ದು, ಭಾರಿ ವಾಹನಗಳ ಸಂಚಾರ ಹೆಚ್ಚಿರುವುದರಿಂದ ರಸ್ತೆ ದುರಸ್ತಿಗೆ ಆದ್ಯತೆ ನೀಡಲಾಗಿದೆ ಎಂದರು. ಗುತ್ತಿಗೆದಾರರು ಹಾಗೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಗುಣಮಟ್ಟದ ಕಾಮಗಾರಿ ನಡೆಸಿ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು ಎಂದು ನಿರ್ದೇಶಿಸಿದರು.

ಗುರಮಠಕಲ್ ಪಟ್ಟಣದಲ್ಲಿ ಬೀದಿ ದೀಪಗಳ ನಿರ್ವಹಣೆ ಪುರಸಭೆಯ ಜವಾಬ್ದಾರಿ ಎಂದು ತಿಳಿಸಿದ ಅವರು, ಉದ್ಯಾನವನ ಸೌಂದರ್ಯೀಕರಣಕ್ಕೆ 50 ಲಕ್ಷ ರೂ. ಅನುದಾನ ನೀಡಲಾಗಿದೆ ಎಂದರು. ಕಾಲವಾರ ಮತ್ತು ಅಂಬಿಗರ ಚೌಡಯ್ಯ ವೃತ್ತ ಅಭಿವೃದ್ಧಿಗೂ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ವೇಳೆ ಗ್ರಾಮಸ್ಥರ ಕುಂದುಕೊರತೆಗಳನ್ನು ಆಲಿಸಿದ ಶಾಸಕ ಕಂದಕೂರ, ಸ್ಥಳದಲ್ಲಿದ್ದ ತಾಲೂಕು ಮಟ್ಟದ ಅಧಿಕಾರಿಗಳಿಗೆ ಸಮಸ್ಯೆ ಪರಿಹಾರಕ್ಕೆ ಸೂಚನೆ ನೀಡಿದರು.

ಈ ವೇಳೆ ತಹಶೀಲ್ದಾರ್ ಚನ್ನಮಲ್ಲಪ್ಪ ಗಂಟಿ, ತಾಪಂ ಇಒ ಅಮರೇಶ ಪಾಟೀಲ್, ಪುರಸಭೆ ಮುಖ್ಯಾಧಿಕಾರಿ ಶರಣಪ್ಪ, ಎಇಇ ಪರಶುರಾಮ, ಸಿಪಿಐ ದೌಲತ್, ಜೆಡಿಎಸ್ ಜಿಲ್ಲಾದ್ಯಕ್ಷ ಸುಭಾಷ್ಚಂದ್ರ ಕಟಕಟಿ, ಪಿಎಲ್ ಡಿ ಬ್ಯಾಂಕ್ ಅದ್ಯಕ್ಷ ರಾಮಣ್ಣ ಯಡ್ಡಳ್ಳಿ, ಮುಖಂಡರಾದ ಸಿದ್ದರಾಮರಡ್ಡಿ ಗುಂಜನೂರ, ಅಜಯರಡ್ಡಿ ಯಲ್ಹೇರಿ, ಶರಣು ಆವಂಟಿ, ರವಿ ಪೋಲಿಸ್ ಪಾಟೀಲ್, ಮಹೇಂದ್ರರಡ್ಡಿ ಕಂದಕೂರ, ಬಸಣ್ಣ ದೇವರಳ್ಳಿ, ರವಿ ಗವಿ ನೋಳ, ಬಸವರಾಜ ದಾಸರ, ಆನಂದ ವಡ ವಟ್, ಬಾಬು, ವೆಂಕಟೇಶ ಪೂಜಾರಿ, ಮೌಲಾ ನಾಬ್, ಹಣಮಂತ ಚಿನ್ನಾಕಾರ, ಸಂದೀಪ ಚಿನ್ನಾಕಾರ, ಪಿಡಿಒ ಜಯಶ್ರೀ ಇದ್ದರು.

ಅಧಿಕಾರಿಗಳು ಸ್ಥಳದಲ್ಲೇ ಇದ್ದು ಕೆಲಸ ಮಾಡಬೇಕು : ಮಳೆಗಾಲ ಆರಂಭವಾಗಿರುವುದರಿಂದ ಗ್ರಾಮೀಣ ಭಾಗದಲ್ಲಿ ಮನೆಗಳು ಬಿರುಕು ಬಿಡುವ ಹಾಗೂ ಕುಸಿಯುವ ಸಾಧ್ಯತೆ ಇದೆ. ಅಧಿಕಾರಿಗಳು ಪಂಚಾಯಿತಿ ವ್ಯಾಪ್ತಿಯಲ್ಲೇ ಕಡ್ಡಾಯವಾಗಿ ಇರಬೇಕು. ಮೇಲಾಧಿಕಾರಿಗಳ ಸೂಚನೆಗಾಗಿ ಕಾಯದೆ ತಕ್ಷಣ ಕಾರ್ಯಪ್ರವೃತ್ತರಾಗಬೇಕು ಎಂದು ಶಾಸಕ ಕಂದಕೂರ ಸೂಚಿಸಿದರು.

ಮಳೆಗಾಲದಲ್ಲಿ ಕುಡಿಯುವ ನೀರು ಕಲುಷಿತಗೊಳ್ಳುವ ಸಾಧ್ಯತೆ ಹೆಚ್ಚಿರುವುದರಿಂದ ಗ್ರಾಮೀಣ ಭಾಗದ ನೀರಿನ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ತಹಶೀಲ್ದಾರರಿಗೆ ನಿರ್ದೇಶನ ನೀಡಿದರು.



ಅಕ್ರಮವಾಗಿ ಸಂಗ್ರಹಿಸಿದ 48 ಗ್ಯಾಸ್ ಸಿಲಿಂಡರ್ ಸೇರಿ 6 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಸ್ವತ್ತು ಜಪ್ತಿ : ಇಬ್ಬರ ಬಂಧನ

ಬೀದರ್,ಮೇ.29-

ಅಕ್ರಮವಾಗಿ ಗ್ಯಾಸ್ ಸಿಲಿಂಡರ್ ಸಂಗ್ರಹಿಸಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಜನವಾಡಾ ಪೊಲೀಸ್ ಠಾಣೆ ವ್ಯಾಪ್ತಿಯ ಮರಕಲ್ ಗ್ರಾಮದಲ್ಲಿ ಪೊಲೀಸರು ಬುಧವಾರ ಕಾರ್ಯಾಚರಣೆ ನಡೆಸಿ ಇಬ್ಬರನ್ನು ಬಂಧಿಸಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಮರಕಲ್ ಗ್ರಾಮದ ಗಣೇಶ ದೇವಸ್ಥಾನದ ಸಮೀಪ ಜನವಾಡಾ ಠಾಣೆ ಪೊಲೀಸರು ದಾಳಿ ನಡೆಸಿದರು. ಈ ವೇಳೆ ಅಕ್ರಮವಾಗಿ ಸಂಗ್ರಹಿಸಲಾಗಿದ್ದ ಒಟ್ಟು 48 ಹೆಚ್‌ಪಿ ಗ್ಯಾಸ್ ಸಿಲಿಂಡರ್‌ಗಳನ್ನು ವಶಪಡಿಸಿಕೊಂಡರು.

ಜಪ್ತಿಯಾದ ಸಿಲಿಂಡರ್‌ಗಳಲ್ಲಿ 90,200 ರೂ. ಮೌಲ್ಯದ 41 ಖಾಲಿ 14 ಕೆ.ಜಿ ಹೆಚ್‌ಪಿ ಗ್ಯಾಸ್ ಸಿಲಿಂಡರ್‌ಗಳು ಹಾಗೂ 22,295 ರೂ. ಮೌಲ್ಯದ 7 ತುಂಬಿದ ಸಿಲಿಂಡರ್‌ಗಳು ಸೇರಿವೆ. ಒಟ್ಟಾರೆ ಸಿಲಿಂಡರ್‌ಗಳ ಮೌಲ್ಯ 1,12,495 ರೂ. ಎಂದು ಅಂದಾಜಿಸಲಾಗಿದೆ.

ಇದಲ್ಲದೆ, ಕೃತ್ಯಕ್ಕೆ ಬಳಸಲಾಗಿದ್ದ ಸುಮಾರು 5,12,495 ರೂ. ಮೌಲ್ಯದ ಎರಡು ಗೂಡ್ಸ್ ಆಟೋಗಳನ್ನು ಸಹ ಪೊಲೀಸರು ಜಪ್ತಿ ಮಾಡಿದ್ದಾರೆ. ಒಟ್ಟು 6,24,990 ರೂ. ಮೌಲ್ಯದ ಸ್ವತ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಬಂಧಿತ ಆರೋಪಿಗಳನ್ನು ವಿಚಾರಣೆ ನಡೆಸಿದಾಗ, ವಶಪಡಿಸಿಕೊಂಡ ಗ್ಯಾಸ್ ಸಿಲಿಂಡರ್‌ಗಳು ಸುಜಾತಾ ಗ್ಯಾಸ್ ಏಜೆನ್ಸಿಗೆ ಸೇರಿದ್ದವು ಎಂಬ ಮಾಹಿತಿ ನೀಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಸುಜಾತಾ ಗ್ಯಾಸ್ ಏಜೆನ್ಸಿ ವಿರುದ್ಧ ಜನವಾಡಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಪುಣೆಯ ರಾಷ್ಟ್ರೀಯ ಕಲಾಶಿಬಿರದಲ್ಲಿ ಮಿಂಚಿದ ಕಲಾವಿದರು



ಕಲಬುರಗಿ,ಮೇ.29-

ಪುಣೆಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ಗ್ರೀಷ್ಮಕಾಲೀನ ಕಲಾ ಪ್ರದರ್ಶನ ಮತ್ತು ಭಾರತೀಯ ಕಲಾ ಶಿಬಿರದಲ್ಲಿ ಭಾಗವಹಿಸಿದ ಕಲಬುರಗಿಯ ಹಲವು ಪ್ರತಿಭಾವಂತ ಕಲಾವಿದರು ತಮ್ಮ ಸೃಜನಶೀಲತೆ ಹಾಗೂ ಕಲಾತ್ಮಕ ವೈಶಿಷ್ಟತೆಯನ್ನು ಅನಾವರಣಗೊಳಿಸಿದರು.

ಮೇ 24 ಮತ್ತು 25ರಂದು ಪುಣೆಯ ಪ್ರತಿಷ್ಠಿತ ಜಿ.ಎಚ್. ರೈಸೋನಿ ಇಂಟರ್‌ನ್ಯಾಷನಲ್ ಸ್ಕಿಲ್ ಟೆಕ್ ವಿಶ್ವವಿದ್ಯಾಲಯ ಆವರಣದಲ್ಲಿ ಎರಡು ದಿನಗಳ ಕಾಲ ಈ ಕಾರ್ಯಕ್ರಮ ನಡೆಯಿತು. ಸಮ್ವೇದ್ ಸ್ಕೂಲ್ ಆಫ್ ಆರ್ಟ್, ಮ್ಯೂಸಿಕ್, ವಿಸ್ಯುಅಲೈಸೇಶನ್, ಎಂಟರ್‌ಟೈನ್‌ಮೆಂಟ್ ಅಂಡ್ ಡಿಸೈನ್ ವತಿಯಿಂದ ಸಮ್ವೇದ್ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಲಾದ ಈ ಸಾಂಸ್ಕೃತಿಕ ಉತ್ಸವವು ಕಲಾ ಪ್ರೇಮಿಗಳಿಗೆ ವಿಶೇಷ ಆಕರ್ಷಣೆಯಾಯಿತು.

ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಕುಲಪತಿ ಡಾ. ಆರ್. ಡಿ. ಖರಾಡೇಕರ್ ಉದ್ಘಾಟಿಸಿದರು. ಪ್ರೊ ಕುಲಪತಿ ಡಾ.ಹೆಂದ್ರೆ, ಸಂವೇದ್ ಶಾಲೆಯ ಡೀನ್ ಡಾ.ಅವಿನಾಶ್ ಡಿ.ಕಾಟೆ, ರಿಜಿಸ್ಟ್ರಾರ್ ಡಾ.ಅಮೋಲ್ ಪೋತೆ, ಕರ್ನಲ್ ಅಜಿತ್ ಸಿಂಘ್ವಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ರಾಷ್ಟ್ರೀಯ ಮಟ್ಟದ ಈ ಕಲಾ ಶಿಬಿರದಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ 16 ಖ್ಯಾತ ''ಬ್ರಾವಿಸಿಮೊ'' ಕಲಾವಿದರು ಪಾಲ್ಗೊಂಡು ತಮ್ಮ ವೈವಿಧ್ಯಮಯ ಕಲಾಶೈಲಿಗಳ ಮೂಲಕ ಪ್ರೇಕ್ಷಕರ ಮನ ಸೆಳೆದರು. ಕಲಬುರಗಿಯಿಂದ ಭಾಗವಹಿಸಿದ್ದ ಕಲಾವಿದರಾದ ರಾಜಶೇಖರ ಶಾಮಣ್ಣ, ರೆಹಮಾನ್ ಪಟೇಲ್, ದಾದಾ ಚಿತ್ರದುರ್ಗ, ಮುಹಮ್ಮದ್ ಅಯಾಜುದ್ದೀನ್ ಪಟೇಲ್, ರಾಜಶೇಖರ ಚಿಂಚೊಳ್ಳಿ, ರೇವಣಸಿದ್ದಪ್ಪ ಹೊಟ್ಟಿ ಹಾಗೂ ಸಯ್ಯದ್ ಮುಸ್ತಫಾ ವಿಶೇಷ ಗಮನ ಸೆಳೆದರು.

ಇನ್ನಿತರ ಪ್ರದೇಶಗಳಿಂದ ಸುರೇಂದ್ರ ಕುಡಪಣೆ ಪಾಟೀಲ್, ಮುಂಜಾ ನರ್ವಾಡೆ, ಪೂರ್ಣಿಮಾ ವಾಲುಂಜ್, ವೈಶಾಲಿ ಸಿತ್ರೆ, ದೇವೇಂದ್ರ ಪೊಟ್ಟುಖೆ, ಮಧುಕರ್ ಚಂದನಶಿವ ಮತ್ತು ಆರತಿ ನಾಗ್ಲೆ ಸೇರಿದಂತೆ ಹಲವು ಕಲಾವಿದರು ಭಾಗವಹಿಸಿದ್ದರು.

ಪ್ರದರ್ಶನದಲ್ಲಿದ್ದ ಕಲಾಕೃತಿಗಳು ಭಾರತೀಯ ಸಾಂಪ್ರದಾಯಿಕ ಕಲಾ ಪರಂಪರೆ ಮತ್ತು ಆಧುನಿಕ ಕಲ್ಪನೆಯ ಸಮನ್ವಯವನ್ನು ಪ್ರತಿಬಿಂಬಿಸಿದವು. ಗ್ರಾಮೀಣ ಜೀವನ, ಭಾರತೀಯ ಸಂಸ್ಕೃತಿ, ಆಧ್ಯಾತ್ಮ ಹಾಗೂ ಸಾಮಾಜಿಕ ಜಾಗೃತಿ ಕುರಿತ ವಿಷಯಗಳನ್ನು ಕಲಾವಿದರು ತಮ್ಮ ಕಲಾಕೃತಿಗಳ ಮೂಲಕ ಮನಮುಟ್ಟುವಂತೆ ಅಭಿವ್ಯಕ್ತಿಪಡಿಸಿದರು.

ಕಾರ್ಯಕ್ರಮದ ನಿರ್ದೇಶಕರಾಗಿ ಡಾ.ಅವಿನಾಶ್ ಡಿ.ಕಾಟೆ ಕಾರ್ಯನಿರ್ವಹಿಸಿದರು. ಎರಡು ದಿನಗಳ ಕಲಾ ಉತ್ಸವವು ಕಲಾವಿದರ ಮಧ್ಯೆ ಸೃಜನಾತ್ಮಕ ಸಂವಾದಕ್ಕೆ ವೇದಿಕೆಯಾಗಿ, ರಾಷ್ಟ್ರೀಯ ಏಕತೆ ಮತ್ತು ಕಲಾ ಸಂಸ್ಕೃತಿಯ ವಿನಿಮಯಕ್ಕೆ ಉತ್ತೇಜನ ನೀಡಿತು.

ಕಲಬುರಗಿಯಲ್ಲಿ ಬುದ್ಧ-ಬಸವ-ಅಂಬೇಡ್ಕರ್ ಸೌಹಾರ್ದ ಸಹಕಾರಿ ಸಂಘ ಉದ್ಘಾಟನೆ

ಕಲಬುರಗಿ,ಮೇ.29-

ಸಾಮಾಜಿಕ ಸೌಹಾರ್ದತೆ, ಆರ್ಥಿಕ ಸ್ವಾವಲಂಬನೆ ಹಾಗೂ ಸಹಕಾರಿ ಮನೋಭಾವದ ಆಶಯದೊಂದಿಗೆ ''ಬುದ್ಧ ಬಸವ ಅಂಬೇಡ್ಕರ್ (ಬಿಬಿಎ) ಸೌಹಾರ್ದ ಸಹಕಾರಿ ಸಂಘ''ವನ್ನು ನಗರದ ಹಳೆ ಜೇವರ್ಗಿ ರಸ್ತೆಯ ಶ್ರೀರಾಮ ಆರ್ಕೆಡ್ ಕಟ್ಟಡದಲ್ಲಿ ರವಿವಾರ ಉದ್ಘಾಟಿಸಲಾಯಿತು.

ಕರ್ನಾಟಕ ರಾಜ್ಯದ ಸೌಹಾರ್ದ ಸಹಕಾರಿ ಸಂಘಗಳ ನಿರ್ದೇಶಕಿ ಶೈಲಜಾ ತಪಲಿ ಅವರು ರಿಬ್ಬನ್ ಕತ್ತರಿಸುವ ಮೂಲಕ ಸಂಘವನ್ನು ಉದ್ಘಾಟಿಸಿದರು. ಬಳಿಕ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ವೇದಿಕೆಯಲ್ಲಿದ್ದ ಗಣ್ಯರನ್ನು ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಬಿಬಿಎ ಸೌಹಾರ್ದ ಸಹಕಾರಿ ಸಂಘದ ನೂತನ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಮಿಣಜಗಿ ಹಾಗೂ ಉಪಾಧ್ಯಕ್ಷರಾಗಿ ಭೀಮರಾಯ ತೆಗನೂರ ಅವರು



ಪ್ರಮಾಣವಚನ ಸ್ವೀಕರಿಸಿದರು. ನೂತನ ಪದಾಧಿಕಾರಿಗಳಿಗೆ ಗಣ್ಯರು ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಶೈಲಜಾ ತಪಲಿ ಅವರು, ''ಸೌಹಾರ್ದ ಸಹಕಾರಿ ಸಂಘಗಳು ರೈತರು ಹಾಗೂ ಸಾಮಾನ್ಯ ಜನರಿಗೆ ಆರ್ಥಿಕ ನೆರವಾಗುತ್ತಿವೆ. ಖಾಸಗಿ ಫೈನಾನ್ಸ್‌ಗಳ ಅವಲಂಬನೆ ಕಡಿಮೆಯಾಗಲು ಸಹಕಾರಿ ಕ್ಷೇತ್ರ ಪ್ರಮುಖ ಪಾತ್ರ ವಹಿಸಿದೆ. ಇದು ಕೇವಲ ವ್ಯವಹಾರವಲ್ಲ, ಸೇವಾ ಕ್ಷೇತ್ರವೂ ಹೌದು. ಮಹಿಳೆಯರ ಆರ್ಥಿಕ ಸ್ವಾವಲಂಬನೆಗೂ ಸಹಕಾರಿ ಸಂಘಗಳು ನೆರವಾಗುತ್ತಿವೆ'' ಎಂದು ಹೇಳಿದರು.

ಸಂಘದ ಮುಖ್ಯ ಕಾರ್ಯನಿರ್ವಾಹಕ ಸೂರ್ಯಕಾಂತ ಎಂ.ಕೆ. ಮಾತನಾಡಿ, ''2000 ರಿಂದ 5000 ರೂ.ವರೆಗೆ ಸದಸ್ಯತ್ವ ಪಡೆಯುವ ಅವಕಾಶ ಕಲ್ಪಿಸಲಾಗಿದೆ. ಸದಸ್ಯರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ, ಆರೋಗ್ಯ ವಿಮೆ ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡಲಾಗುತ್ತದೆ. ಸಾಲ ಪಡೆದ ಸದಸ್ಯರು ಅನಾರೋಗ್ಯ ಅಥವಾ ಆಕಸ್ಮಿಕ ಮರಣ ಹೊಂದಿದಲ್ಲಿ ಸಾಲ ಮನ್ನಾ ಮಾಡುವ ವಿಶೇಷ ಯೋಜನೆಯನ್ನೂ ಜಾರಿಗೆ ತರಲಾಗಿದೆ'' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಜೀವ ಕುಮಾರ್ ಮಹಾಜನ, ಕಲಬುರಗಿ ಸೌಹಾರ್ದ ಸಹಕಾರಿ ಒಕ್ಕೂಟದ ಅಧ್ಯಕ್ಷ ಎಸ್.ಎಸ್. ಪಾಟೀಲ್, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ಪತ್ತಿನ ಸಂಘದ ಪ್ರಾಂತೀಯ ವ್ಯವಸ್ಥಾಪಕ ಸಂಜಯ ಕೋಟಕರ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಮಿಣಜಗಿ ವಹಿಸಿದ್ದರು. ಸೂರ್ಯಕಾಂತ್ ಎಂ.ಕೆ., ಶೋಭಾವತಿ, ಉಪಸ್ಥಿತರಿದ್ದರು.

ಒಂದನೇಯ ಪುಟದಿಂದ

ಸರ್ಕಾರ ರಚನೆ ಕುರಿತು ದೆಹಲಿಯಲ್ಲಿ ಕಾರ್ಯತಂತ್ರ

ಈವರೆಗಿನ ಬೆಳವಣಿಗೆಗಳ ಪ್ರಕಾರ ಡಿ.ಕೆ.ಶಿವಕುಮಾರ್ ಅವರೇ ಮುಂದಿನ ಮುಖ್ಯಮಂತ್ರಿ ಎಂದು ಹೇಳಲಾಗಿದೆ. ಆದರೆ ಅದು ಕಾರ್ಯಸಾಧುವಾಗಬೇಕಾದರೆ, ತಾಂತ್ರಿಕವಾಗಿ ಶಾಸಕಾಂಗ ಸಭೆಯಲ್ಲಿ ಚುನಾಯಿತರಾಗಬೇಕಿದೆ.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಿದ್ದರಾಮಯ್ಯ ಅವರು, ನಿನ್ನೆ ಸಚಿವರ ಉಪಾಹಾರ ಕೂಟದಲ್ಲಿ ಡಿ.ಕೆ.ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಎಂದು ಹೇಳಿರುವುದಾಗಿ ಎಚ್.ಕೆ.ಪಾಟೀಲ್ ತಿಳಿಸಿದರು. ಆದರೆ, ಬಳಿಕ ಪತ್ರಿಕಾಗೋಷ್ಠಿಯಲ್ಲಿ ಸಿದ್ದರಾಮಯ್ಯ ಮಾತನಾಡುವಾಗ, ಕಾಗ್ರೆಸ್ ಹೈಕಮಾಂಡ್ ಮತ್ತು ಶಾಸಕಾಂಗ ಸಭೆ ನಿರ್ಧರಿಸಿದವರು ಮುಂದಿನ ಮುಖ್ಯಮಂತ್ರಿಯಾಗುತ್ತಾರೆ ಎಂದು ಹೇಳಿ ಜಾರಿಕೊಂಡರು. ಆದರೆ ಈ ಮಾತನ್ನು ಹೇಳುವಾಗ ಸಿದ್ದರಾಮಯ್ಯ ಅವರು, ಡಿ.ಕೆ.ಶಿವಕುಮಾರ್ ಅವರ ಕಡೆಗೆ ತಿರುಗಿ ನಕ್ಕಿದ್ದು, ಸೂಚ್ಯವಾಗಿತ್ತು.

ದೆಹಲಿಯಲ್ಲಿಂದು ಸಿದ್ದರಾಮಯ್ಯ ಅವರು ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿದ ವೇಳೆ ಮುಂದಿನ ಮುಖ್ಯಮಂತ್ರಿ ಹಾಗೂ ಸಚಿವರ ಸಂಪುಟ ರಚನೆ ಕುರಿತಂತೆ ತಮದೇ ಆದ ಅಭಿಪ್ರಾಯ ಮಂಡಿಸಿದ್ದಾರೆ ಎಂದು ತಿಳಿದು ಬಂದಿದೆ.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು, ಮಧ್ಯಪ್ರದೇಶದಿಂದ ನಿನ್ನೆ ವಿಶೇಷ ವಿಮಾನದಲ್ಲಿ ಆಗಮಿಸಿ, ಸಿದ್ದರಾಮಯ್ಯ ಅವರ ರಾಜೀನಾಮೆಯನ್ನು ಅಂಗೀಕರಿಸಿದ್ದಾರೆ. ತನೂಲಕ ಸಂಪುಟವು ವಿಸರ್ಜನೆಗೊಂಡಿದೆ. ಇನ್ನೂ ತಡ ಮಾಡಿದರೆ, ಬೇರೆ ರೀತಿಯ ರಾಜಕೀಯ ಬೆಳವಣಿಗೆಗಳಾಗಬಹುದು ಎಂಬ ಅತಂಕ ಇರುವುದರಿಂದ ಎಲ್ಲವನ್ನೂ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕಾಂಗ್ರೆಸ್ ನಾಯಕರು ಪ್ರಯತ್ನಿಸುತ್ತಿದ್ದಾರೆ. ಬಹುತೇಕ ಡಿ.ಕೆ.ಶಿವಕುಮಾರ್ ಇಂದು ಬೆಂಗಳೂರಿಗೆ ಮರಳುವ ಸಾಧ್ಯತೆ ಇದ್ದು, ನಾಳೆಯಿಂದಲೇ ಸರ್ಕಾರ ರಚನೆಯ ಪ್ರಕ್ರಿಯೆ ಆರಂಭಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಟ್ಟು ಸಹಜ ಪ್ರಕ್ರಿಯೆ ಕಳಂಕವಲ್ಲ.ಡಾ ಅಯ್ಯನಗೌಡ

ಸಾಂಕ್ರಾಮಿಕ ರೋಗಗಳ ತಪಾಸಣೆ ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ

ನಂತರ ರಾಮಾನುಜನ್ ಕುಮಾರ್ ಎಲ್ ಎನ್ ಆರ್ ಕೆ ಎಸ್ ಕೆ ಆಪ್ತ ಸಮಾಲೋಚಕರು ವಿಶ್ವ ಋತುಚಕ್ರ ನೈರ್ಮಲ್ಯ ದಿನ ಕಾರ್ಯಕ್ರಮವನ್ನು ಉದ್ದೇಶಿಸಿ ರಾಷ್ಟ್ರೀಯ ಕಿಶೋರ ಸ್ವಾಸ್ಥ ಕಾರ್ಯಕ್ರಮದ ಅಡಿಯಲ್ಲಿ ನಡೆಯುತ್ತಿರುವ ಈ ಕಾರ್ಯಕ್ರಮದಲ್ಲಿ ಮುಟ್ಟಿನ ಸ್ನೇಹಿತ ಪ್ರಪಂಚಕ್ಕಾಗಿ ಎಲ್ಲರೂ ಹೋಗೋಣ ಎಂಬ ಘೋಷ ವಾಕ್ಯವನ್ನು ಹೇಳುತ್ತಾ ಋತುಚಕ್ರವೇಳೆ ನೈರ್ಮಲ್ಯ ಕಾಪಾಡದಿದ್ದರೆ ಏನಾಗುತ್ತದೆ ಎಂಬ ವಿಷಯದ ಕುರಿತು ವಿದ್ಯಾರ್ಥಿಗಳಲ್ಲಿ ಯುಟಿಐ, ರ್‌ಟಿಐ, ಟಿಟಿಎಸ್ ಬಂಜೆತನದ ಸಮಸ್ಯೆಗಳು, ಪಿಐಡಿ ಸಮಸ್ಯೆಗಳು ಇತರೆ ಹಲವಾರು ಸಮಸ್ಯೆಗಳು ಮುಟ್ಟಿನ ನೈರ್ಮಲ್ಯ ಇಲ್ಲದೆ ಇರುವುದರಿಂದ ಆಗುವ ಸಂಭವಗಳು ಜಾಸ್ತಿ ಇರುತ್ತದೆ ಎಂದು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದರು ಜೊತೆಗೆ ಸ್ನೇಹ ಕ್ಲಿನಿಕ್ ಸೇವಾ ಸೌಲಭ್ಯಗಳ ಕುರಿತು ಹಾಗೂ ಋತುಚಕ್ರ ಸಂಬಂಧ ಸಮಸ್ಯೆಗಳ ನಿವಾರಣೆ ನಂತರ ತಾಲೂಕ ಬಿಎಚ್‌ಇಓ ಅಧಿಕಾರಿಗಳಾದ ಶ್ರೀಮತಿ ಗೀತಾ ಹಿರೇಮಠ್ ರವರು ಮುಟ್ಟಿನ ನೈರ್ಮಲ್ಯ ದಿನ ಕಾರ್ಯಕ್ರಮ ಅಂಗವಾಗಿ ಮುಟ್ಟಿನ ಸ್ನೇಹಿತರಿಗೆ ಪರಿಸರ ನಿರ್ಮಾಣ ಮಾಡುವುದು ಮುಟ್ಟಿನ ಅವಧಿಯಲ್ಲಿ ಪಾಲಿಸಬೇಕಾದ ಕ್ರಮಗಳ ಕುರಿತು ಸಣ್ಣ ವಯಸ್ಸಿ ನಿಂದಲೇ ಅರಿವು ಮೂಡಿಸುವುದು ಮುಟ್ಟಿನ ಉತ್ಪನ್ನಗಳು ಸುಲಭವಾಗಿ ದೊರೆಯುವಂತೆ ವ್ಯವಸ್ಥೆ ಕಲ್ಪಿಸುವುದು, ಮುಟ್ಟಿನ ಸ್ನೇಹಿತ ಮುಟ್ಟಿಗೆ ಸಂಬಂಧಿಸಿದ ಸೂಕ್ತ ಆರೋಗ್ಯ ಸೇವೆಗಳನ್ನು ಒದಗಿಸುವುದು ಈ ಎಲ್ಲ ವಿಷಯಗಳ ಕುರಿತು ಹಾಗೂ ವಿದ್ಯಾರ್ಥಿಗಳ ಗೊಂದಲಗಳ ನಿವಾರಣೆಯ ಕುರಿತು ಮಾಹಿತಿ ನೀಡಿದರು.

ನಂತರ ನ್‌ಟಿಇಪಿ ಕಾರ್ಯಕ್ರಮದ ಎಸ್ ಟಿ ಎಸ್ ಅಧಿಕಾರಿಗಳಾದ ಯಮನೂರಪ್ಪನವರು ಕ್ಷಯರೋಗ ದ ಲಕ್ಷಣಗಳು, ಚಿಕಿತ್ಸೆ ಮತ್ತು ತಪಾಸಣೆ ಹಾಗೂ ನಿವಾರಣ ಮಾರ್ಗಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದವರು ತಾಲೂಕ ಆರೋಗ್ಯ ಅಧಿಕಾರಿಗಳಾದ ಡಾಕ್ಟರ್ ಅಯ್ಯನಗೌಡ ಉಪಸ್ಥಿತರಿದ್ದರು, ಹಾಗೂಕಾಲೇಜಿನ ಉಪಾಧ್ಯಕ್ಷರಾದ ಇರ್ಷಾದ್ ರವರು ಉಪಸ್ಥಿತರಿದ್ದರು, ಕಾಲೇಜಿನ ಪ್ರಾಚಾರ್ಯರಾದ ಶ್ರೀ ಸೀರಿಲ್ ರವರು ಉಪಸ್ಥಿತರಿದ್ದರು. ಆರೋಗ್ಯ ಇಲಾಖೆಯ ಸಿಬ್ಬಂದಿಗಳಾದ ತಾಲೂಕ ಬಿಹೆಚ್‌ಇಓ ಅಧಿಕಾರಿಗಳಾದ ಶ್ರೀಮತಿ ಗೀತಾ ಹಿರೇಮಠ ವಿ ಬಿ ಡಿ ಟಿ ಎಸ್ ಕಾರ್ಯಕ್ರಮದ ಎಫ್ ಎ ಹಾನಿಗಿ ಆರ್ಕೆ ಎಸ್ ಕೆ ಆಪ್ತ ಸಮಾಲೋಚಕರಾದ ರಾಮಾನುಜನ್ ಕುಮಾರ್ ಎಲ್ ಎನ್ ಎಸ್ ಟಿ ಎಸ್ ಯಮನೂರಪ್ಪ ಶ ಸುರೇಶ ರೆಡ್ಡಿ, ಡಿಎಂಎಚ್‌ಪಿ ಕಾರ್ಯಕ್ರಮದ ಶ್ರೀ ಅರುಣ್ ಕುಮಾರ್ ಕೆ ಶ್ರೀಮತಿ ಗಂಗಮ್ಮ ಶ್ರೀಮತಿ ಮಂಜುಳಾ ಹಾಗೂ ಕಾಲೇಜಿನ ಸಮಸ್ತ ವಿದ್ಯಾರ್ಥಿಗಳು, ಇತರರು ಉಪಸ್ಥಿತರಿದ್ದರು.

ಹಿಂದುಳಿದವರ ಪಾಲಿಗೆ ಶ್ರೀರಕ್ಷೆ, ಧೀಮಂತ ನಾಯಕ ಸಿದ್ದರಾಮಯ್ಯ : ಕೆ.ಶಿವನಗೌಡ ನಾಯಕ

ರಾಜಕೀಯ ನಾಯಕರಲ್ಲಿ ಸಿದ್ದರಾಮಯ್ಯ ಅವರಂತಹ ವ್ಯಕ್ತಿತ್ವ ಮತ್ತೊಮ್ಮೆ ಕಾಣುವುದು ಬಹಳ ಕಷ್ಟ.

ಸಿದ್ದರಾಮಯ್ಯ ಅವರಂತಹ ಜನಪರ, ತತ್ವನಿಷ್ಠ ಹಾಗೂ ಬುದ್ಧ, ಬಸವ,ಅಂಬೇಡ್ಕರ್ ಚಿಂತನೆಗಳನ್ನು ಯಾವಾಗ್ಲೂ ಅಳವಡಿಸಿಕೊಂಡ ನಾಯಕ ಮತ್ತೊಬ್ಬ ಸಿಗಲಿಕ್ಕಿಲ್ಲ. ನಾನು ಬೇರೆ ಪಕ್ಷದವನು ಆಗಿದ್ರು ಕೂಡ ವೈಯಕ್ತಿಕವಾಗಿ ನಾನು ಅವರ ಅಪ್ಪಟ ಅಭಿಮಾನಿ.

ಸದನದಲ್ಲಿ ಇದ್ದಾಗ ಅವರು ನಿರ್ಗಳವಾಗಿ ಅಂಕಿ ಸಂಖ್ಯೆ ಸಮೇತ ಸದನದಲ್ಲಿ ವಿಷಯ ಮಂಡನೆ ಮಾಡುವ ವಾಗ್ಮಿಗಳು..ಇಡೀ ಇತಿಹಾಸದ ಸದನದಲ್ಲಿ ಇವರ ತರ ನಿರ್ಭಿತಿಯಿಂದ ವಿಷಯ ಮಂಡನೆ ಯಲ್ಲಿ ಗುಡುಗುವ ತರ ಇನ್ನೊಬ್ಬ ರಾಜಕಾರಣಿಯನ್ನು ಕಾಣಲು ಸಾಧ್ಯವಿಲ್ಲ.

''ಹುದ್ದೆ ದೊಡ್ಡದಲ್ಲ, ಹೃದಯ ದೊಡ್ಡದಾದಾಗ ಜನಮನದಲ್ಲಿ ನಾಯಕ ಶಾಶ್ವತವಾಗುತ್ತಾನೆ'' ಎನ್ನುವ ಮಾತಿಗೆ ಸಿದ್ದರಾಮಯ್ಯ ಅವರೇ ಜೀವಂತ ಉದಾಹರಣೆ. ಅಧಿಕಾರ ಅವರಿಗಾಗಿ ಅಲಂಕಾರವಾ ಗಿರಲಿಲ್ಲ. ಅದು ಜನಸಾಮಾನ್ಯರಿಗೆ ನ್ಯಾಯ ತಲುಪಿಸುವ ಸಾಧನವಾ ಗಿತ್ತು.

''ಮರೆಯಲಾಗದ ಮನುಷ್ಯರು ಕೆಲವರು ಇತಿಹಾಸದಲ್ಲಿ ಬರೆಯಲ್ಪ ಡುತ್ತಾರೆ, ಆದರೆ ಕೆಲವರು ಜನರ ಹೃದಯದಲ್ಲಿ ನೆಲೆಸುತ್ತಾರೆ'' ಎಂಬಂತೆ ಸಿದ್ದರಾಮಯ್ಯ ಅವರು ಅಹಿಂದ ವರ್ಗಗಳ ಹಾಗೂ ಬಡ ವರು, ಶೋಷಿತರು, ದಮನಿತರ, ದಲಿತರ ಎಲ್ಲರ ಮನಸ್ಸಿ ನಲ್ಲಿ ಸದಾ ಉಳಿಯುವ ನಾಯಕರು.

ಸಾಮಾಜಿಕ ನ್ಯಾಯ ಹಾಗೂ ಸಮಾನತೆಯ ಮೌಲ್ಯಗಳನ್ನು ಕೈಬಿಡದೆ ನಡೆದ ಅಪರೂಪದ ರಾಜಕಾರಣಿ.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನದಿಂದ ನಿರ್ಗ ಮಿಸಿರುವುದು ರಾಜ್ಯ ರಾಜಕಾರಣಕ್ಕೆ ಪಕ್ಷತಿತವಾಗಿ ದೊಡ್ಡ ನಷ್ಟವಾಗಿದೆ. ಅವರ ಅನುಭವ, ಸರಳತೆ ಹಾಗೂ ಅವರ ಜನಪರ ಆಡಳಿತವನ್ನು ಜನರು ಸದಾ ನೆನಪಿಸಿಕೊಳ್ಳುತ್ತಾರೆ. ಅವರ ಮುಂದಿನ ಜೀವನ ಸದಾ ಆರೋಗ್ಯದಿಂದ ಕೂಡಿರಲಿ ಹಾಗೂ ಮುಂದಿನ ದಿನಗಳಲ್ಲೂ ಸಹ ರಾಜಕೀಯ ಕ್ಷೇತ್ರಕ್ಕೆ ಅವರ ಮಾರ್ಗ ದರ್ಶನ ಇರಲಿ ಎಂದು ಭಾರವಾದ ನೋವಿನೊಂದಿಗೆ ಅವರಿಗೆ ಶುಭ ಹಾರೈಸಿದ್ದಾರೆ.

ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ರಾಜಕೀಯ ಆಯುಧವಾಗಿ ಬಳಸುತ್ತಿದೆ: ಕೆ.ಜಿ.ವಿರೇಶ

ಸಿಪಿಐ(ಎಂ) ರಾಷ್ಟ್ರೀಯ ಕಾರ್ಯದರ್ಶಿ , ಹಿರಿಯ ನಾಯಕಿ ಸೇರಿದಂತೆ ಹಲವು ನಾಯಕರನ್ನು ಬಂಧಿಸಿರುವ ಕ್ರಮವನ್ನೂ ಅವರು ಖಂಡಿಸಿದರು. ವಿರೋಧ ಪಕ್ಷಗಳ ನಾಯಕರನ್ನು ಗುರಿಯಾಗಿಸಿಕೊಂಡು ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸುವುದು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ, ನಿರುದ್ಯೋಗ, ರೈತರು ಹಾಗೂ ಕಾರ್ಮಿಕರ ಸಂಕಷ್ಟಗಳಂತಹ ಜನಜೀವನದ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ಸೆಳೆಯಲು ಬಿಜೆಪಿ ಸರ್ಕಾರ ಇಂತಹ ರಾಜಕೀಯ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಆರೋಪಿಸಿದರು.

ಸಿಪಿಐ(ಎಂ) ಯಾವುದೇ ತನಿಖೆಗೆ ವಿರೋಧಿಯಲ್ಲ. ಆದರೆ ಕೇಂದ್ರ ಸಂಸ್ಥೆಗಳ ರಾಜಕೀಯ ದುರುಪಯೋಗವನ್ನು ಒಪ್ಪಿಕೊಳ್ಳುವುದಿಲ್ಲ. ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿಯನ್ನು ವಿರೋಧಿಸಿ ದೇಶಾದ್ಯಂತ ಹೋರಾಟಗಳನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಹೆಚ್. ಪದ್ಮಾ, ಡಿ.ಎಸ್. ಶರಣಬಸವ, ಕರಿಯಪ್ಪ ಅಚ್ಚೊಳಿ, ಜಿಲಾನಿ ಪಾಷಾ, ವರಲಕ್ಷ್ಮೀ, ಶ್ರೀಧರ, ವಿರೇಶ ಯಾಪಲದಿನ್ನಿ, ನರಸಿಂಹಲು ಪುಚ್ಚಲದಿನ್ನಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ನಿರಾಶ್ರಿತರಿಗೆ ಹೊಸ ಜೀವದ ಆಶ್ರಯ ನೀಡಿದ ಕಾರುಣ್ಯ ಆಶ್ರಮ ಸೇವಾ ಟ್ರಸ್ಟ್

ನಡೆಯುತ್ತಿರುವ ಈ ಆಶ್ರಮ ಅನೇಕ ಜನರ ಬದುಕಿನಲ್ಲಿ ಅದ್ಭುತ ಬದಲಾವಣೆ ತಂದಿದೆ. ಕೆಲವರು ಆತ್ಮಹತ್ಯೆ ಯೋಚನೆಯಿಂದ ದೂರ ಸರಿದು ಬದುಕಿನ ಮೇಲೆ ನಂಬಿಕೆ ಇಟ್ಟಿದ್ದಾರೆ.

ಸಿಂಧನೂರಿನ ಬಸ್ ನಿಲ್ದಾಣ ದಲ್ಲಿ ಇದ್ದಂತ ಕೆಲವು ನಿರಾಶ್ರಿತರಿಗೆ ಆಶ್ರಯ ನೀಡಿದ ಕರುಣಾಮಯಿ.

ಇಂದಿನ ಕಾಲದಲ್ಲಿ ಸ್ವಾರ್ಥ ಹೆಚ್ಚುತ್ತಿರುವಾಗ ಕಾರುಣ್ಯ ಆಶ್ರಮ ದಂತಹ ಸಂಸ್ಥೆಗಳು ಮಾನವೀಯ ತೆಯ ದೀಪವಾಗಿವೆ. ಇಲ್ಲಿ ಹಣಕ್ಕಿಂತ ಪ್ರೀತಿಗೆ ಮೌಲ್ಯ ಇದೆ. ಜಾತಿ, ಧರ್ಮ, ಭಾಷೆ ಎಂಬ ಬೇಧಗಳಿ ಲ್ಲದೆ ಎಲ್ಲರನ್ನು ಒಂದೇ ಕುಟುಂಬ ದಂತೆ ಕಾಣಲಾಗುತ್ತದೆ.

ಈ ಆಶ್ರಮದ ಕಾರ್ಯಗಳನ್ನು ನೋಡಿದಾಗ ನನಗೆ ಒಂದು ಪ್ರಶ್ನೆ ಮೂಡಿತು ''ನಾವು ಸಮಾಜಕ್ಕಾಗಿ ಏನು ಮಾಡುತ್ತಿದ್ದೇವೆ?''ಯಾಕೆಂದರೆ ಮಾನವನ ಬದುಕಿನ ನಿಜವಾದ ಅರ್ಥ ಇನ್ನೊಬ್ಬರ ಕಣ್ಣೀರು ಒರೆಸುವುದಲ್ಲದೆ ಮತ್ತೇನೂ ಅಲ್ಲ. ಒಂದು ಹಸಿದ ಹೊಟ್ಟೆಗೆ ಅನ್ನ ನೀಡುವುದು, ನಿರಾಶ್ರಿತನಿಗೆ ಆಶ್ರಯ ನೀಡುವುದು, ನಿರಾಶೆಯಲ್ಲಿರುವವನಿಗೆ ಧೈರ್ಯ ತುಂಬುವುದು ಇವುಗಳಿಗಿಂತ ದೊಡ್ಡ ಪೂಜೆ ಬೇರೆ ಇಲ್ಲ.

ಚನ್ನಬಸವ ಸ್ವಾಮಿ ಹಿರೇಮಠ ಅವರಂತಹ ಸೇವಾಭಾವಿ ವ್ಯಕ್ತಿಗಳಿಂದಲೇ ಸಮಾಜದಲ್ಲಿ ಇನ್ನೂ ಮಾನವೀಯತೆ ಜೀವಂತವಾಗಿದೆ ಎಂಬ ನಂಬಿಕೆ .

''ಒಬ್ಬರ ಬದುಕಿನಲ್ಲಿ ಬೆಳಕು ಹಚ್ಚಿದರೆ, ಅದು ಸಾವಿರ ದೀಪಗಳಿಗಿಂತ ಮಿಗಿಲು'' ಎಂಬ ಮಾತಿನ ನಿಜವಾದ ರೂಪವೇ ಕಾರುಣ್ಯ ಆಶ್ರಮ ಸೇವಾ ಟ್ರಸ್ಟ್. ಅವರು ತಿಳಿಸಿದ್ದಾರೆ.

ಒಂದೇ ವಾಹನಕ್ಕೆ ಕುರುಗೋಡು ಅಗ್ನಿಶಾಮಕ ಠಾಣೆ ಸೀಮಿತ

ಅವಘಡ ಹೆಚ್ಚಾದರೂ ಹೊಸ ವಾಹನ ನೀಡದ ಇಲಾಖೆ ವಿರುದ್ಧ ಆಕ್ರೋಶ



ಬಳ್ಳಾರಿ / ಕುರುಗೋಡು ,ಮೇ.29-

ಪಟ್ಟಣದ ಅಗ್ನಿಶಾಮಕ ಠಾಣೆಯಲ್ಲಿ ಪ್ರಸ್ತುತ ಒಂದೇ ಅಗ್ನಿಶಾಮಕ ವಾಹನ ಕಾರ್ಯನಿರ್ವಹಿಸುತ್ತಿದ್ದು, ಏಕಕಾಲಕ್ಕೆ ಹಲವು ಕಡೆ ಬೆಂಕಿ ಅವಘಡ ಸಂಭವಿಸಿದರೆ ಸಿಬ್ಬಂದಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಹಿಂದೆ ಠಾಣೆಯಲ್ಲಿ ಎರಡು ವಾಹನಗಳಿದ್ದರೂ, 15 ವರ್ಷಗಳ ಸೇವೆ ಪೂರ್ಣಗೊಳಿಸಿದ್ದ ಒಂದು ವಾಹನವನ್ನು ಎರಡು ವರ್ಷಗಳ ಹಿಂದೆಯೇ ಸ್ಥಗಿತಗೊಳಿಸಲಾಗಿದೆ. ಕುರುಗೋಡು ತಾಲ್ಲೂಕಿನ 33 ಹಳ್ಳಿಗಳು, 25 ಕ್ಯಾಂಪ್‌ಗಳು ಸೇರಿದಂತೆ ಸಿರಿಗೇರಿ, ಕಂಪ್ಲಿ, ಎಮ್ಮಿಗನೂರು ಹಾಗೂ ಬಳ್ಳಾಪುರ ಭಾಗದ ಗ್ರಾಮಗಳು ಅಗ್ನಿ ಅವಘಡಗಳ ಸಂದರ್ಭದಲ್ಲಿ ಇದೇ ಠಾಣೆಯನ್ನು ಅವಲಂಬಿಸಿವೆ.

ಬೇಸಿಗೆಯ ತೀವ್ರತೆಯಿಂದ ಗುಡಿಸಲು, ಹುಲ್ಲಿನ ಬಣವೆ ಹಾಗೂ ಅಪಘಾತ ಸಂಬಂಧಿತ ಬೆಂಕಿ ಅವಘಡಗಳು ಹೆಚ್ಚಾಗುತ್ತಿವೆ. ಒಂದೇ ದಿನ ಎರಡು ಕಡೆ ಬೆಂಕಿ ಕಾಣಿಸಿಕೊಂಡರೆ ರಕ್ಷಣಾ ಕಾರ್ಯಾಚರಣೆ ನಡೆಸುವುದು ಕಷ್ಟಸಾಧ್ಯವಾಗುತ್ತಿದೆ. ಇಂತಹ ಸಂದರ್ಭಗಳಲ್ಲಿ 30ರಿಂದ 50 ಕಿಲೋಮೀಟರ್ ದೂರದ ಬಳ್ಳಾರಿ ಅಥವಾ ಸಿರುಗುಪ್ಪದಿಂದ ವಾಹನಗಳು ಬರುವಷ್ಟರಲ್ಲಿ ಆಸ್ತಿಪಾಸ್ತಿಗಳು ಬೆಂಕಿಗೆ ಆಹುತಿಯಾಗುತ್ತಿವೆ.

ಇತ್ತೀಚೆಗೆ ಪಟ್ಟಣದ ಮನೆಯೊಂದರಲ್ಲಿ ಸಿಲಿಂಡರ್ ಸೋರಿಕೆಯಿಂದ ಬೆಂಕಿ ಕಾಣಿಸಿಕೊಂಡ ವೇಳೆ ಅಗ್ನಿಶಾಮಕ ವಾಹನ ಅಲ್ಲಿಗೆ ತೆರಳಿದ್ದಾಗಲೇ ಸೋಮಲಾಪುರ ಗ್ರಾಮದಲ್ಲಿ ಬಣವೆಗೆ ಬೆಂಕಿ ಬಿದ್ದ ಘಟನೆ ನಡೆದಿದೆ. ಒಂದೇ ವಾಹನ ಇರುವುದರಿಂದ ಎರಡೂ ಕಡೆ ತಕ್ಷಣ ಸ್ಪಂದಿಸಲು ಸಾಧ್ಯವಾಗಿರಲಿಲ್ಲ. ವಾರ್ಷಿಕವಾಗಿ 100ಕ್ಕೂ ಹೆಚ್ಚು ಅಗ್ನಿ ಅವಘಡಗಳು ಸಂಭವಿಸುತ್ತಿದ್ದರೂ ಮತ್ತೊಂದು ವಾಹನ ನೀಡದಿರುವುದಕ್ಕೆ ರೈತ ಮುಖಂಡ ಗುರಳ್ಳಿ ರಾಜ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಠಾಣೆಯಲ್ಲಿ 26 ಸಿಬ್ಬಂದಿ ಇರಬೇಕಾದರೆ ಪ್ರಸ್ತುತ 21 ಸಿಬ್ಬಂದಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದು, 5 ಹುದ್ದೆಗಳು ಖಾಲಿ ಇವೆ. ಸಿಬ್ಬಂದಿಗೆ ವಸತಿಗೃಹ ನಿರ್ಮಿಸಲು ಈವರೆಗೂ ಸರ್ಕಾರಿ ಜಾಗ ಗುರುತಿಸದಿರುವುದು ಮತ್ತೊಂದು ಸಮಸ್ಯೆಯಾಗಿದೆ.

2005ರಲ್ಲಿ ಆರಂಭವಾದ ಠಾಣೆ :

2005ರಲ್ಲಿ ನಾರಾ ಸೂರ್ಯನಾರಾಯಣ ರೆಡ್ಡಿ ಅವರು ಶಾಸಕರಾಗಿದ್ದ ಅವಧಿಯಲ್ಲಿ ಎಪಿಎಂಸಿ ಉಪ ಮಾರುಕಟ್ಟೆಯ ಶೆಡ್‌ನಲ್ಲಿ ಅಗ್ನಿಶಾಮಕ ಠಾಣೆ ಆರಂಭಿಸಲಾಗಿತ್ತು. ಬಳಿಕ 2010ರಲ್ಲಿ ಜಿ. ಜನಾರ್ಧನರೆಡ್ಡಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ವೇಳೆ ಹಾಗೂ ಟಿ.ಎಚ್. ಸುರೇಶ್ ಬಾಬು ಶಾಸಕರಾಗಿದ್ದ ಅವಧಿಯಲ್ಲಿ ಬಳ್ಳಾರಿ ರಸ್ತೆಯ ನೂತನ ಕಟ್ಟಡಕ್ಕೆ ಠಾಣೆ ಸ್ಥಳಾಂತರಿಸಲಾಯಿತು. ಠಾಣೆಗೆ ಸುಸಜ್ಜಿತ ಕಟ್ಟಡವಿದ್ದರೂ ವಸತಿಗೃಹಗಳ ಕೊರತೆ ಸಿಬ್ಬಂದಿಗೆ ತೊಂದರೆಯಾಗಿದೆ.

ಡಿವಿಜನ್ ಹಾಗೂ ಜಿಲ್ಲಾ ಕಚೇರಿಗಳಿಗೆ ವಾಹನ ಮತ್ತು ಸಿಬ್ಬಂದಿ ಕೊರತೆ ಕುರಿತು ಮನವಿ ಸಲ್ಲಿಸಲಾಗಿದೆ. ಹಂತ ಹಂತವಾಗಿ ವಾಹನ ಹಾಗೂ ಸಿಬ್ಬಂದಿ ಒದಗಿಸಲಾಗುವುದು ಎಂದು ಮೇಲಾಧಿಕಾರಿಗಳು ತಿಳಿಸಿದ್ದಾರೆ.

-ಎಂ. ಮೈಲಾರಪ್ಪ, ಅಗ್ನಿಶಾಮಕ ಠಾಣಾಧಿಕಾರಿ, ಕುರುಗೋಡು

ರಸಗೊಬ್ಬರ, ಇಂಧನ ಬೆಲೆ ಇಳಿಕೆಗೆ ಕರ್ನಾಟಕ ರಾಜ್ಯ ರೈತ ಸಂಘ ಆಗ್ರಹ

ಕಲಬುರಗಿ,ಮೇ.29-

ರೈತರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ರಸಗೊಬ್ಬರ ಹಾಗೂ ಇಂಧನದ ಬೆಲೆಯನ್ನು ತಕ್ಷಣ ಇಳಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಜಿಲ್ಲಾಡಳಿತದ ಮೂಲಕ ಕೇಂದ್ರ ಮತ್ತು



ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಸಂಘದ ಜಿಲ್ಲಾಧ್ಯಕ್ಷ ನಾಗೇಂದ್ರಪ್ಪ ಥಂಭೆ ಮಾತನಾಡಿ, ದಿನದಿಂದ ದಿನಕ್ಕೆ ರಸಗೊಬ್ಬರ ಮತ್ತು ಇಂಧನದ ಬೆಲೆ ಏರಿಕೆಯಿಂದ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಕೃಷಿ ಚಟುವಟಿಕೆಗಳ ವೆಚ್ಚ ಹೆಚ್ಚಾಗುತ್ತಿರುವ ಹಿನ್ನೆಲೆ ಸರ್ಕಾರ ರೈತರ ಪರವಾದ ಕ್ರಮ ಕೈಗೊಂಡು ಬೆಲೆ ಇಳಿಕೆ ಮಾಡಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ರಮೇಶ ರಾಗಿ, ಮಂಜುಳಾ ಭಜಂತ್ರಿ, ಮಹಾದೇವಿ ಭಜಂತ್ರಿ, ಮಂಜು ಸಿಕೆ, ಸಿದ್ದು ಪಾಟೀಲ, ಕರೆಪ್ಪ ಕಾರಗುಂಡ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಪ್ರೀತಿ ತ್ಯಾಗ ಸೌಹಾರ್ದತೆ ಮತ್ತು ಸಹೋದರತ್ವದ ಸಂದೇಶ ಸಾರುವ ಪವಿತ್ರ ಹಬ್ಬ. ಈದ್ ಉಲ್ ಆದಾ. (ಬಕ್ರೀದ್)ಅಲಂಬಾಷಾ ಖಾದ್ರಿ

ಬಲಿದಾನ. ಬಲಿ ನೀಡಿದ ಪ್ರಾಣಿಯ ಮಾಂಸವನ್ನು ಬಡವರು ಬಂಧುಗಳು ಮತ್ತು ನೆರೆಹೊರೆಯವರೊಂದಿಗೆ ಹಂಚಿಕೊಳ್ಳುವ ಪದ್ಧತಿ , ದಯಾ ಧರ್ಮದ ಮಹತ್ವವನ್ನು ಸಮಾಜಕ್ಕೆ ಕಲಿಸುತ್ತದೆ. ನಿಜವಾದ ಧರ್ಮದ ಅರ್ಥ ಕರುಣೆ ದಯೆ ಭಕ್ತಿ ಇಲ್ಲದ ಮನುಷ್ಯನ ಜೀವನ ಅಪೂರ್ಣ. ನಿಷ್ಠೆ ಪೂಜೆ ಇಲ್ಲದೆ ಮನುಷ್ಯನ ಜೀವನ ನಿರರ್ಥಕ. ಮನುಷ್ಯನ ಹೃದಯದಲ್ಲಿ ದಯೆ ಅರಳಿದಾಗ ಮಾತ್ರ ಧರ್ಮಕ್ಕೆ ಅರ್ಥವಿರುತ್ತದೆ. ಬಕ್ರೀದ್ ಹಬ್ಬವು ಇದೇ ದಯ ಧರ್ಮದ ಸಂದೇಶವನ್ನು ಸಾರುತ್ತದೆ. ಹಸಿದವನಿಗೆ ಅನ್ನ ನೀಡುವ ಕೈಗಳು ದುಃಖಿತ ನಿಗೆ ಸ್ವಾಂತ ನ ಹೇಳುವ ಧೈರ್ಯ ತುಂಬುವ ಆತ್ಮಿಯತೆಯನ್ನು ನೀಡುವ ಹೃದಯಗಳು ಸಮಾಜದಲ್ಲಿ ಹೆಚ್ಚಾದಾಗ ಮಾತ್ರ ದೇಶದಲ್ಲಿ ನಿಜವಾಗಿ ಶಾಂತಿ ನೆಲೆಸುತ್ತದೆ. ಭಾರತ ದೇಶವು ಹಲವು ಧರ್ಮ ಮತ್ತು ಸಾಂಸ್ಕೃತಿಗಳ ಸಮಾಗಮ ವಾಗಿದೆ. ಇಲ್ಲಿ ಪ್ರತಿಯೊಂದು ಹಬ್ಬವು ಕೇವಲ ಆಚರಣೆಯಷ್ಟೇ ಅಲ್ಲ ಮಾನವೀಯ ಮೌಲ್ಯಗಳನ್ನು ಸಾರುವ ಪವಿತ್ರ ಸಂದರ್ಭಗಳಾಗಿವೆ. ಮುಸ್ಲಿಂ ಸಮಾಜವು ಪ್ರಮುಖ ಹಬ್ಬಗಳಲ್ಲಿ ಒಂದಾದ ಬಕ್ರೀದ್ ಹಬ್ಬವು ಸಹ ತ್ಯಾಗ ಭಕ್ತಿ ಸಹೋದರತ್ವ ಮತ್ತು ಸಾಮಾಜಿಕ ಸಾಮ್ಯರಸದ ಸಂದೇಶವನ್ನು ನೀಡುವ ಮಹತ್ವದ ಹಬ್ಬವಾಗಿದೆ. ಇಸ್ಲಾಮಿಕ್ ಪರಂಪರೆಯ ಪ್ರಕಾರ ಪ್ರವಾದಿ ಇಬ್ರಾಹಿಂ ಅವರು ದೇವರ ಆದೇಶಕ್ಕೆ ತಲೆಬಾಗುತ್ತ. ತಮ್ಮ ಪ್ರೀತಿಯ ಮಗನನ್ನೇ ತ್ಯಾಗ ಮಾಡಲು ಸಿದ್ದರಾದ ಘಟನೆ ಈ ಹಬ್ಬದ ಹಿನ್ನೆಲೆಯಾಗಿದೆ. ಅವರ ಭಕ್ತಿಯನ್ನು ಮೆಚ್ಚಿ ಅಲ್ಲಾಹನು ಮಗನ ಬದಲು ಪ್ರಾಣಿಯನ್ನು ಬಲಿಯಾಗಿ ಅರ್ಪಿಸಲು ಸೂಚಿಸಿದನು. ಇದೇ ತ್ಯಾಗದ ಸಂದೇಶವನ್ನು ಪ್ರತಿ ವರ್ಷ ಇದ್ ಉಲ್ ಆದಾ. (ಬಕ್ರೀದ್) ಹಬ್ಬದ ಮೂಲಕ ನೆನಪಿಸಲಾಗುತ್ತದೆ. ಆದ್ದರಿಂದ ಸಮಾಜದಲ್ಲಿ ಶಾಂತಿ ಸಹಕಾರ ಮತ್ತು ಮಾನವೀಯತೆ ಉಳಿಯಬೇಕಾದರೆ ಇಂತಹ ಹಬ್ಬಗಳ ಸಂದೇಶವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ ಬಕ್ರೀದ್ ಹಬ್ಬವು ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲ. ತ್ಯಾಗ ದಾನ ಪ್ರೀತಿ ಮತ್ತು ಸಮಾನತೆ ಸಾಮಾಜಿಕ ಸಾಮ್ಯರಸದ ಮಹತ್ವವನ್ನು ಸಾರುವ ಪವಿತ್ರ ಹಬ್ಬವಾಗಿದೆ. ಎಲ್ಲಾ ಸಮಾಜದ ಜನರು ಪರಸ್ಪರ ಗೌರವ ವಿಶ್ವಾಸ ಮತ್ತು ಸಹೋದರತ್ವದಿಂದ ಬದುಕಿದಾಗ ಮಾತ್ರ ಸಮಾಜದಲ್ಲಿ ನಿಜವಾದ ಶಾಂತಿ ನೆಲೆಸಲು ಸಾಧ್ಯವಿದೆ ಎಂದರು. ಬಯಾನ್ ನಿನ್. ನಂತರ. ರೋಷನ್ ಅವರು ತಕ್ಬೀರ್ ಹೇಳಿದರು. ತಕ್ಬೀರ್ ನಂತರ. ಸಾಮೂಹಿಕವಾಗಿ ನಮಾಜ್ ಮಾಡಲಾಯಿತು. ನಮಾಜಿನ ನಂತರ ಪರಸ್ಪರ ಆಲಂಗಿಸಿಕೊಳ್ಳುವ ಮೂಲಕ ಬಕ್ರೀದ್ ಹಬ್ಬದ ಶುಭಾಶಯಗಳು ಕೋರಿದರು. ಸಂದರ್ಭದಲ್ಲಿ. ಬಡಾವಣೆಯ ಹಿರಿಯ ಮುಖಂಡರಾದ. ಸೈಯದ್ ಹಸನ್ ಮುಲ್ಲಾ. ಸೈಯದ್ ರಸೂಲ್ ಮುಲ್ಲಾ. ಸೈಯದ್ ರೌಫ್ ಮುಲ್ಲಾ. ಸೈಯದ್ ಹಾಜಿ ಮುಲ್ಲಾ. ಸೈಯದ್ ಜಾವಿದ್ ಮುಲ್ಲಾ ವಕೀಲರು . ಫಿರೋಜ್. ತೌಫಿಕ್. ಸೈಫ್. ಅಫ್ರೋಜ್. ಶಬ್ಬೀರ್ ಮುಲ್ಲಾ. ಸೂಫಿಯಾನ್. ರುಹಾನ್ ಅರಹಾನ್. ಮತ್ತು ಸಂಜೆ ಜ್ವಾಲೆ ಪತ್ರಿಕೆ ಸಿಂಧನೂರು ವರದಿಗಾರರಾದ. ಜಹೂರ ಅಹಮದ್. ಹಾಗೂ ಇನ್ನೂ ಅನೇಕರು ಉಪಸ್ಥಿತರಿದ್ದರು.

ಫೋನ್ ಪೇ ವಂಚನೆ ಜಾಲಕ್ಕೆ ಬಲಿಯಾದ ಸಿಎಸ್‌ಸಿ ಕೇಂದ್ರಗಳು?

ಖಾತೆ ಫ್ರೀಜ್; ಪೊಲೀಸರ ಕಿರುಕುಳ ಆರೋಪ

ಆರೋಪಿಗಳಂತೆ ವರ್ತಿಸುತ್ತಿದ್ದಾರೆ ಎಂದು ಆರೋಪಿಸಿದರು.

ಮಲೆದೇವರಗುಡ್ಡ ಗ್ರಾಮದ ನರೇಂದ್ರ ಬಸವರಾಜ ಅವರ CSC ಕೇಂದ್ರದಲ್ಲಿ ಎಂ. ರಮೇಶ ಬಾಬು ಹೆಸರಿನ ಖಾತೆಯಿಂದ ಎರಡು ಬಾರಿ ತಲಾ ?20,400 ಹಣ ವರ್ಗಾವಣೆ ನಡೆದಿದೆ. ಬಳಿಕ ಅವರ ಬ್ಯಾಂಕ್ ಖಾತೆ ಸಂಪೂರ್ಣ ಫ್ರೀಜ್ ಆಗಿದೆ. ಇದೇ ರೀತಿ ಬಸವರಾಜ ತಿಪ್ಪಣ್ಣ ಅವರಿಗೆ ?30 ಸಾವಿರ, ಅರಕೇರಾದ ಎಸ್.ಎಸ್. ಕಂಪ್ಯೂಟರ್ ಕೇಂದ್ರ ದ ಮಹಾಂತೇಶ್ ಅವರಿಗೆ ?28 ಸಾವಿರ ಹಣ ವರ್ಗಾವಣೆ ನಡೆದ ತಕ್ಷಣ ಖಾತೆಗಳು ಸ್ಥಗಿತಗೊಂಡಿವೆ ಎಂದು ವಿವರಿಸಿದರು.

ಅರಕೇರಾ ಪಟ್ಟಣದ ವಿಶ್ವನಾಥ ಎಟಿಎಂ ಬೆಂಚ್ (CSP) ಕೇಂದ್ರ ದಲ್ಲೂ ಎಂ.ಕುಮಾರಿ, ರಾಮ ಬಾಬು ಎಂ. ಮತ್ತು ಎಂ. ರಾಮ ಬಾಬು ಹೆಸರಿನ ಖಾತೆಗಳಿಂದ ಒಟ್ಟು 1.53 ಲಕ್ಷ ಹಣ ವರ್ಗಾವಣೆ ಮಾಡಲಾಗಿದೆ. ಈ ಮೂರು ಖಾತೆಗಳ ಕೊನೆಯ ನಾಲ್ಕು ಅಂಕಿಗಳು ಒಂದೇ ಆಗಿರುವುದು ದೊಡ್ಡ ಅನುಮಾನಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಒಟ್ಟು 45 ನಿಮಿಷಗಳಲ್ಲಿ ಸುಮಾರು 2.51 ಲಕ್ಷ ಹಣ ವರ್ಗಾವಣೆ ನಡೆದಿದೆ. ಹಣ ವರ್ಗಾವಣೆ ಮಾಡಿದವರು 2,500 ಕಮಿಷನ್ ಸಹ ನೀಡಿದ್ದಾರೆ. ಹೆಣ್ಣು ಮಗುವನ್ನು ಆಸ್ಪತ್ರೆಗೆ ದಾಖಲಿಸಿದ್ದೇವೆ, ತುರ್ತು ಹಣ ಬೇಕಾಗಿದೆ ಎಂದು ಭಾವನಾತ್ಮಕವಾಗಿ ನಂಬಿಸಿ ಹಣ ಪಡೆದುಕೊಂಡಿದ್ದಾರೆ ಎಂದು ದೂರಿದರು.

ಘಟನೆ ನಡೆದ ಅದೇ ದಿನ ಸಂಜೆ ಸಂಬಂಧಿತ ವ್ಯಕ್ತಿಗಳು ಕರೆ ಮಾಡಿ ಹಣ ವಾಪಸ್ ಕೊಡದಿದ್ದರೆ ಎಫ್‌ಐಆರ್ ದಾಖಲಿಸಿ ನಿಮ್ಮ ಖಾತೆಗಳನ್ನು ಫ್ರೀಜ್ ಮಾಡಿಸುತ್ತೇವೆಃ ಎಂದು ಬೆದರಿಕೆ ಹಾಕಿದ್ದಾರೆ. ಬಳಿಕ ಸೈಬರ್ ಕ್ರೈಂ ಪೊಲೀಸರ ಹೆಸರಿನಲ್ಲಿ ಕರೆ ಮಾಡಿ ಅಂಗಡಿ ಹಾಗೂ ವಿಳಾಸದ ಮಾಹಿತಿ ಪಡೆದಿದ್ದಾರೆ ಎಂದು ಆರೋಪಿಸಿದರು.

ಮೇ 26ರಂದು ಕೆಲವರು ಕಾರಿನಲ್ಲಿ ಕರೆದುಕೊಂಡು ಹೋಗಿ ರಾಯಚೂರು ಪಶ್ಚಿಮ ಪೊಲೀಸ್ ಠಾಣೆಯಲ್ಲಿ ಗಂಟೆಗಳ ಕಾಲ ಕೂರಿಸಿ 2.51 ಲಕ್ಷ ಹಣ ನೀಡುವಂತೆ ಒತ್ತಾಯಿಸಿದ್ದಾರೆ. ಃಹಣ ಕೊಟ್ಟರೆ ಖಾತೆ ಅನ್ಫ್ರೀಜ್ ಮಾಡಿಸುತ್ತೇವೆ, ಇಲ್ಲವಾದರೆ ಐವರ ಮೇಲೂ ಎಫ್‌ಐಆರ್ ದಾಖಲಿಸುತ್ತೇವೆ ಎಂದು ಬೆದರಿಸಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಅಳಲು ತೋಡಿಕೊಂಡರು.

ಪೊಲೀಸರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 35(3) ಅಡಿಯಲ್ಲಿ ನೋಟೀಸ್ ನೀಡಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ. ಮಲ್ಲಿಕಾರ್ಜುನ ಸೇರಿದಂತೆ ಕೆಲವರನ್ನು ಸಂಶಯಾಸ್ಪದ ವ್ಯಕ್ತಿಗಳೆಂದು ದಾಖಲಿಸಲಾಗಿದೆ ಎಂದು ತಿಳಿಸಿದರು.

ಮರುದಿನ ದೇವದುರ್ಗ ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ ಪ್ರಕರಣ ದಾಖಲಿಸದೆ ವಾಪಸ್ ಕಳುಹಿಸಲಾಗಿದೆ ಎಂದು ಆರೋಪಿಸಿದರು. ಃಇಂತಹ ಪ್ರಕರಣಗಳು ಹಲವಿವೆಃ ಎಂದು ಕಉಐ ಹೇಳಿ ನಿರ್ಲಕ್ಷ್ಯ ತೋರಿದ್ದಾರೆ ಎಂದು ದೂರಿದರು.

ಃನಮಗೆ ನ್ಯಾಯ ಕೊಡಿಸಬೇಕು, ಫ್ರೀಜ್ ಆಗಿರುವ ಖಾತೆಗಳನ್ನು ತಕ್ಷಣ ಅನ್ಫ್ರೀಜ್ ಮಾಡಿಸಬೇಕು. ಮುಂದೆ ಏನಾದರೂ ಅನಾಹುತವಾದರೆ ದೇವದುರ್ಗ ಮತ್ತು ರಾಯಚೂರು ಪಶ್ಚಿಮ ಪೊಲೀಸ್ ಠಾಣೆಯವರೇ ನೇರ ಹೊಣೆಗಾರರುಃ ಎಂದು ಜಿ. ಶರಣಬಸಪ್ಪ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬಸವರಾಜ್, ನರೇಂದ್ರ, ಮಹಾಂತೇಶ್, ಜಿ. ಶರಣಬಸಪ್ಪ ಹಾಗೂ ಮಲ್ಲಿಕಾರ್ಜುನ ಉಪಸ್ಥಿತರಿದ್ದರು.



ಸಿರುಗುಪ್ಪ: ಸೌದಾಗರ್ ಜುಮ್ಮಾ ಮಜೀದ್ ನಲ್ಲಿ ಗೌರವ ಸನ್ಮಾನ

ಸಿರುಗುಪ್ಪ,ಮೇ.29-

ಸೌದಾಗರ್ ಜುಮ್ಮಾ ಸುನ್ನಿ ಮಜೀದ್ ನಲ್ಲಿ ಖಲೀಫಾ ಮೌಲಾನ ಹಾಜಿ ಅಬ್ದುಲ್ ಸಮದ್ ನಿಜಾಮಿ ಬಂದಾ ನವಾಜಿ ಸಾಹಬ್, ಖತಿಬೊ ಇಮಾಮ್ ಮೌಲಾನಾ ಮೊಹಮ್ಮದ್ ಅಮೀಸ್, ಹಾಜಿ ಹಂಡಿ ಹುಸೇನ್ ಬಾಷಾ, ಹಾಜಿ ಎ. ಮೊಹಮ್ಮದ್ ಇಬ್ರಾಹಿಂ ಮಸೀದಿಯ ಮುಖ್ಯಸ್ಥರನ್ನು ಈದ್ಗಾ ಮತ್ತು ಖಬರಸ್ಥಾನ್ ಕಮೀಟಿಯ ಮಾಜಿ ಅಧ್ಯಕ್ಷರಾದ ಹಂಡಿ ಅಬ್ದುಲ್ ಕರೀಂ ಸಾಹಬ್ ಅವರ ಮಗ ಹಂಡಿ ಹುಸೇನ್ ಸಾಬ್ ಅವರು ಗೌರವಿಸಿ ಗುಲ್ಪೊಷಿ ಮಾಡಿ ಸನ್ಮಾನಿಸಿದರು

ಮಸೀದಿಯ ಅಧ್ಯಕ್ಷರು ಎಂ. ಮೆಹಬೂಬ್ ಬಾಷಾ, ಪದಾಧಿಕಾರಿಗಳು ಮೊಹಮ್ಮದ್ ರಫಿ ಮೊಹಮ್ಮದ್ ನೌಷಾದ್ ಅಲಿ ಮೊಹಮ್ಮದ್ ಗೌಸ್ ಮೊಹಮ್ಮದ್ ನಿಜಾಮುದ್ದೀನ್ ಮೊಹಮ್ಮದ್ ಹಾಜಿ, ಹಾಜಿ ಟಿ.ಜಿ. ನಿಜಾವ್, ಗಫೂರ್ ಸಾಬ್, ಬೈಲೂರು ಜಿಲಾನ್ ಕೆ.ಖಾಜಾ ಸಮುದಾಯದವರು ಇದ್ದರು



ತೆಲಂಗಾಣ: ಕುರಿ ಮೇಕೆ ನಿಗಮದ ರಾಜ್ಯಾಧ್ಯಕ್ಷರಾದ ಸರಿತಾ ತಿರುಪತಯ್ಯಗಾರಿಗೆ ಸನ್ಮಾನ

ರಾಯಚೂರು,ಮೇ.29-

ತೆಲಂಗಾಣ ರಾಜ್ಯದ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನೂತನ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾದ ಸರಿತಾ ತಿರುಪತಯ್ಯಗಾರು ಅವರಿಗೆ ಕರ್ನಾಟಕ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಲ ವತಿಯಿಂದಸನ್ಮಾನ ಮಾಡಿ ಅಭಿನಂದನೆಗಳು ಸಲ್ಲಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಸಂಘಗಳ ಮಹಾಮಂಡಲ ಬೆಂಗಳೂರು ನಿರ್ದೇಶಕರಾದ ಶ್ರೀನಿವಾಸ್ ಏಗನೂರು, ಅಂಬಯ್ಯಗೌಡ, ಬಾಬು ಮಿಲಾಲ್, ರಾಜಶೇಖರ್ ಆನಂದ ಗೌಡ ಕೆಟಿ ದೊಡ್ಡಿ ಮಂಡಲ ಅಧ್ಯಕ್ಷರು, ನರಸಪ್ಪ, ರಾಜು ಅನೇಕರು ಉಪಸ್ಥಿತರಿದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

ನಿಮ್ಮೂರು ಸುದ್ದಿ

ಸಂಪಾದಕೀಯ

ವರದಕ್ಷಿಣೆ ಎನ್ನುವ ದರೋಡೆಗೆ ಕಡಿವಾಣ ಬೀಳುವುದು ಎಂದು?



ಮಧ್ಯ ಪ್ರದೇಶದ ಭೋಪಾಲ್ ನಿವಾಸಿ ತ್ವಿಶಾ ಶರ್ಮಾ ಅವರ ಆತ್ಮಹತ್ಯೆ ಮಾಧ್ಯಮಗಳಲ್ಲಿ ಸುದ್ದಿಯಾಗುತ್ತಿದ್ದಂತೆಯೇ ದೇಶದಲ್ಲಿ ವರದಕ್ಷಿಣೆಯ ವಿರುದ್ಧದ ಆಕ್ರೋಶ ಮತ್ತೆ ಮುನ್ನೆಲೆಗೆ ಬಂದಿದೆ. ತ್ವಿಶಾ ಶರ್ಮಾ ಪ್ರಕರಣದ ಆರೋಪಿ ಒಬ್ಬ ನ್ಯಾಯವಾದಿಯಾಗಿರುವುದು ಇನ್ನೊಂದು ವಿಪರ್ಯಾಸವಾಗಿದೆ. ತ್ವಿಶಾ ಶರ್ಮಾ ಆತ್ಮಹತ್ಯೆ ಮಾಡಿಕೊಂಡ ಸ್ಥಿತಿಯಲ್ಲಿ ಪತ್ತೆಯಾದ ಹತ್ತು ದಿನಗಳ ಬಳಿಕ ಆರೋಪಿ ಸಮರ್ಥ್ ಸಿಂಗ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಈವರೆಗೆ ಭಾರತದಲ್ಲಿ ಗ್ರಾಮೀಣ ಪ್ರದೇಶವನ್ನು ಅಥವಾ ಅನಕ್ಷರಸ್ಥರನ್ನು ಗುರಿಯಾಗಿಸಿಕೊಂಡು ವರದಕ್ಷಿಣೆ ಪಿಡುಗು ಚರ್ಚೆಯಾಗುತ್ತಿತ್ತು. ಆದರೆ ಇತ್ತೀಚೆಗೆ ಬೆಳಕಿಗೆ ಬಂದ ಹಲವು ವರದಕ್ಷಿಣೆ ಸಾವು ಪ್ರಕರಣಗಳನ್ನು ಅವಲೋಕಿಸಿದರೆ, ವರದಕ್ಷಿಣೆಯೆನ್ನುವುದು ಹತ್ತು ಹಲವು ರೂಪಗಳಲ್ಲಿ ನಮ್ಮ ಕುಟುಂಬ ವ್ಯವಸ್ಥೆಯನ್ನು ಇನ್ನಷ್ಟು ಬಲವಾಗಿ ಸುತ್ತಿಕೊಳ್ಳುತ್ತಿರುವುದು ಕಂಡು ಬರುತ್ತದೆ. ವಿದ್ಯೆ, ಕಾನೂನಿನ ಕೊರತೆಯೇ ವರದಕ್ಷಿಣೆಗೆ ಕಾರಣ ಎಂದು ಈ ಹಿಂದೆ ಭಾವಿಸಲಾಗಿತ್ತು. ಆದರೆ ಇತ್ತೀಚೆಗೆ ವರದಕ್ಷಿಣೆ ಹೆಸರಿನಲ್ಲಿ ಕಿರುಕುಳಗಳು ಮೇಲ್ಮಧ್ಯಮ, ಸುಶಿಕ್ಷಿತ ಕುಟುಂಬಗಳಲ್ಲೇ ಹೆಚ್ಚಾಗುತ್ತಿದೆ. ಇತ್ತೀಚೆಗೆ ಬೆಂಗಳೂರಿನ ತಲಘಟ್ಟಪುರದಲ್ಲಿ ವರದಕ್ಷಿಣೆ ಕಿರುಕುಳದಿಂದ ನೊಂದು ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಮಾಧ್ಯಮಗಳಲ್ಲಿ ವರದಿಯಾಗಿತ್ತು. ಇಲ್ಲಿ ಗಂಡ-ಹೆಂಡತಿ ಪ್ರೀತಿಸಿ ಕುಟುಂಬದ ಸಮ್ಮತಿಯೊಂದಿಗೆ ಮದುವೆಯಾಗಿದ್ದರು. ಇಬ್ಬರೂ ವಿದ್ಯಾವಂತರಾಗಿದ್ದು ಪತ್ನಿ ಕೈ ತುಂಬಾ ವೇತನವಿರುವ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದರು. ಸಣ್ಣ ಮಗು ಬೇರೆ ಇತ್ತು. ಇಷ್ಟಾದರೂ ಆಕೆ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಸ್ಥಿತಿ ನಿರ್ಮಾಣವಾಯಿತು. ಇದೀಗ ಪತಿ ಮತ್ತು ಆತನ ಕುಟುಂಬದ ವಿರುದ್ಧ ವರದಕ್ಷಿಣೆ ಕಿರುಕುಳ ಆರೋಪ ದಾಖಲಾಗಿದೆ. ಕಾನೂನನ್ನು ಬಿಗಿ ಗೊಳಿಸುವ ಮೂಲಕ ವರದಕ್ಷಿಣೆ ಪಿಡುಗನ್ನು ಇಲ್ಲವಾಗಿಸಬಹುದು ಎನ್ನುವ ತರ್ಕವೂ ತ್ವಿಶಾ ಪ್ರಕರಣದಲ್ಲಿ ನೆಲೆ ಕಳೆದುಕೊಂಡಿದೆ. ಯಾಕೆಂದರೆ, ತ್ವಿಶಾ ಪ್ರಕರಣದಲ್ಲಿ ಆರೋಪಿ ಕಾನೂನು ಪುಸ್ತಕವನ್ನು ಓದಿದ್ದ ಒಬ್ಬ ನ್ಯಾಯವಾದಿಯಾಗಿದ್ದ. ಕಳೆದ ಕೆಲವೇ ದಿನಗಳಲ್ಲಿ ನಾಲ್ಕು ಮಂದಿ ಮಹಿಳೆಯರು ವರದಕ್ಷಿಣೆ ಕಿರುಕುಳದಿಂದ ಮೃತಪಟ್ಟಿದ್ದಾರೆ. ಇವರೆಲ್ಲರೂ ನಗರ ಪ್ರದೇಶಕ್ಕೆ ಸೇರಿದವರು. ಮೇಲ್ಮಧ್ಯಮ ಕುಟುಂಬದಿಂದ ಬಂದವರು.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ನೀಡಿದ ಅಂಕಿಅಂಶಗಳ ಪ್ರಕಾರ ಭಾರತದಲ್ಲಿ 2024ರಲ್ಲಿ 5,737 ವರದಕ್ಷಿಣೆ ಸಾವುಗಳು ದಾಖಲಾಗಿವೆ. ಈ ದೇಶದಲ್ಲಿ ಪ್ರತಿ ದಿನ ಸರಾಸರಿ 16 ಮಹಿಳೆಯರು ವರದಕ್ಷಿಣೆಯ ಹೆಸರಿನಲ್ಲಿ ಕೊಲೆಯಾಗುತ್ತಿದ್ದಾರೆ ಅಥವಾ ಆತ್ಮಹತ್ಯೆಗೆ ಬಲಿಯಾಗುತ್ತಿದ್ದಾರೆ. 2024ರ ಅಂಕಿಅಂಶಗಳ ಪ್ರಕಾರ ರಾಮ ಹುಟ್ಟಿದ ನೆಲವೆಂದು ನಂಬಲಾಗಿರುವ ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ವರದಕ್ಷಿಣೆ ಸಾವುಗಳು ಸಂಭವಿಸಿವೆ. ಭಾರತದ ವರದಕ್ಷಿಣೆ ಸಾವುಗಳ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಸಾವುಗಳು ಸಂಭವಿಸುತ್ತಿರುವುದು ಉತ್ತರ ಪ್ರದೇಶದಲ್ಲಿ. ಆನಂತರದ ಸ್ಥಾನದಲ್ಲಿ ಬಿಹಾರವಿದೆ. 2023ರಲ್ಲಿ ಭಾರತದಲ್ಲಿ 15,489 ಪ್ರಕರಣಗಳು ದಾಖಲಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ಅತಿ ಹೆಚ್ಚು ವರದಕ್ಷಿಣೆ ಪ್ರಕರಣಗಳು ದಾಖಲಾಗಿರುವ ವರ್ಷ ಇದಾಗಿದೆ. ರಸ್ತೆಯಲ್ಲಿ ನಡೆಯುವ ಅಪರಾಧಕ್ಕಿಂತಲೂ ವರದಕ್ಷಿಣೆ ಕಿರುಕುಳ, ಸಾವುಗಳು ಹೆಚ್ಚು ಆತಂಕಕಾರಿಯಾಗಿದೆ. ರಸ್ತೆಯಲ್ಲಿ ಅಪರಾಧ ಎಸಗುವವರು ಅಪರಾಧ ಹಿನ್ನೆಲೆಯವರೇ ಆಗಿರುತ್ತಾರೆ. ಅಲ್ಲಿ ನಡೆಯುವ ಅಪರಾಧಗಳನ್ನು ದರೋಡೆ, ಹಲ್ಲೆ, ಹತ್ಯೆಗಳೆಂದು ನಾವು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಕುಟುಂಬ ವ್ಯವಸ್ಥೆಯೊಳಗೆ ಸಜ್ಜನ ಮುಖವಾಡದಲ್ಲಿ ನಡೆಯುವ ಈ ದರೋಡೆಗಳನ್ನು ವರದಕ್ಷಿಣೆ ಎನ್ನುವ ಘನ ಹೆಸರಿನಲ್ಲಿ ಗುರುತಿಸುತ್ತಾ ಬಂದಿದ್ದೇವೆ. ಈ ದರೋಡೆಯಲ್ಲಿ ಭಾಗಿಯಾಗುವ ಮಂದಿ ಸಮಾಜದಲ್ಲಿ ಗಣ್ಯರ ವೇಷದಲ್ಲಿರುತ್ತಾರೆ. ಗಂಡನ ತಾಯಿ, ತಂದೆ, ಸೋದರ, ಸೋದರಿ, ಎಲ್ಲರ ಭಾಗೀದಾರಿಕೆಯೊಂದಿಗೆ ಈ ಅಪರಾಧ ನಡೆಯುತ್ತದೆ ಮತ್ತು ಈ ದರೋಡೆಯನ್ನು ಅವರು ತಮ್ಮ ಹಕ್ಕು ಎಂದು ತಿಳಿದುಕೊಂಡಿರುತ್ತಾರೆ. ಈ ದರೋಡೆಗೆ ಸಮಾಜವೂ ಮೌನ ಸಮ್ಮತಿಯನ್ನು ನೀಡುತ್ತಿರುತ್ತದೆ.


ದಾಂಪತ್ಯ ಎರಡು ಮನಸ್ಸುಗಳ ಬೆಸುಗೆ. ನಮ್ಮ ಸಮಾಜದಲ್ಲಿ ಮದುವೆಯೆಂದರೆ ಎರಡು ಕುಟುಂಬಗಳ ಬೆಸುಗೆಯೂ ಹೌದು. ಅದನ್ನು ನಾವು ಹಣ, ಚಿನ್ನ, ಕಾರುಗಳ ಮೂಲಕ ಬೆಸೆಯಲು ಹೊರಟಾಗ ನಡೆಯುವ ದುರಂತಗಳು ಇವು. ಅನೇಕ ಸಂದರ್ಭದಲ್ಲಿ ಗಂಡ ಹೆಂಡಿರ ಅಥವಾ ಎರಡು ಕುಟುಂಬಗಳ ನಡುವಿನ ವೈಮನಸ್ಯ ಅಂತಿಮವಾಗಿ ವರದಕ್ಷಿಣೆ ಕಿರುಕುಳ ದೂರಿಗೆ ಕಾರಣವಾಗುವುದೂ ಇದೆ. ಅಂದರೆ, ವರದಕ್ಷಿಣೆ ವಿರುದ್ಧದ ಕಾನೂನಿನ ದುರಪಯೋಗ ಕೂಡ ನಡೆಯುವುದಿದೆ. ವರದಕ್ಷಿಣೆಗೆ ಕೇವಲ ಹಣದ ದಾಹವಷ್ಟೇ ಕಾರಣವಲ್ಲ. ಕುಟುಂಬ ವ್ಯವಸ್ಥೆಯ ಮೌಲ್ಯಗಳ ಕುಸಿತವೂ ಕಾರಣ. ಸಾಧಾರಣವಾಗಿ, ಲಿವಿಂಗ್ ಟುಗೆದರ್ ಪ್ರೇಮ ವಿವಾಹಗಳ ದುರಂತಗಳನ್ನು ಮುಂದಿಟ್ಟುಕೊಂಡು ಮಾಧ್ಯಮಗಳು ಸಾಕಷ್ಟು ಚರ್ಚೆ ಮಾಡುತ್ತವೆ. ಫ್ರಿಜ್‌ನೊಳಗೆ ಸಿಕ್ಕಿದ ಮೃತದೇಹಗಳನ್ನು ಮುಂದಿಟ್ಟುಕೊಂಡು ಸಾಮಾಜಿಕ ಮೌಲ್ಯಗಳು ಕುಸಿದ ಬಗ್ಗೆಯೂ ಚರ್ಚೆಯಾಗುತ್ತದೆ. ಆದರೆ ಸಾಂಪ್ರದಾಯಿಕವಾಗಿ, ಧಾರ್ಮಿಕ ವಿಧಿ ವಿಧಾನಗಳ ಮೂಲಕ ಎರಡು ಕುಟುಂಬಗಳ ಪೂರ್ಣ ಸಮ್ಮತಿಯೊಂದಿಗೆ ನಡೆದ ಮದುವೆಗಳು ಬಳಿಕ ಅಪರಾಧಗಳಲ್ಲಿ ಕೊನೆಯಾಗುವುದರ ಬಗ್ಗೆ ನಮ್ಮ ಸಮಾಜ ಕಣ್ಣಿದ್ದೂ ಕುರುಡಾಗಿದೆ. ಇಂದು ರಸ್ತೆಯಲ್ಲಿ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯಗಳಿಗಿಂತ ಹೆಚ್ಚಾಗಿ ಕುಟುಂಬ ವ್ಯವಸ್ಥೆಯೊಳಗೆ ತಮ್ಮವರು ಎಂದು ಕರೆಸಿಕೊಂಡವರಿಂದಲೇ ನಡೆಯುತ್ತದೆ. ಗಂಡನ ಮನೆಗೆ ತೆರಳಿದ ಹೆಣ್ಣು ಆ ಮನೆಯ ಅವಿಭಾಜ್ಯ ಅಂಗವಾಗುವಷ್ಟರಲ್ಲಿ ಅವಳು ದೈಹಿಕ, ಮಾನಸಿಕವಾದ ಹಲವು ಅಂಗಗಳನ್ನು ಕಳೆದುಕೊಳ್ಳಬೇಕಾಗುತ್ತದೆ. ಹತ್ತು ಹಲವು ಅವಮಾನಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ ಮತ್ತು ಸಹಿಸಿಕೊಳ್ಳುವುದು ಅವಳ ಕರ್ತವ್ಯ ಎಂದು ನಮ್ಮ ಸಮಾಜವೂ ಅವಳಿಗೆ ಪದೇ ಪದೇ ನೆನಪಿಸಿ ಕೊಡುತ್ತದೆ. ಇದೇ ಸಂದರ್ಭದಲ್ಲಿ ವರದಕ್ಷಿಣೆ ಕಿರುಕುಳವನ್ನು ಮಾನಸಿಕವಾಗಿ ಸಹಿಸಿಕೊಂಡು ಜೀವನ ದೂಡುತ್ತಿರುವ ಸಾವಿರಾರು ಹೆಣ್ಣು ಮಕ್ಕಳ ಕತೆ ಮಾಧ್ಯಮಗಳಲ್ಲಿ ಚರ್ಚೆಯಾಗುವುದೇ ಇಲ್ಲ. ಚರ್ಚೆಯಾಗಬೇಕಾದರೆ ಆಕೆ ಅಂತಿಮವಾಗಿ ನೇಣಿನ ಕುಣಿಕೆಗೆ ಬಲಿಯಾಗಬೇಕು. ಅಲ್ಲಿಯವರೆಗೆ ಹೆಣ್ಣು ಹೆತ್ತವರಿಗೂ ಆಕೆಯ ಸಮಸ್ಯೆ ಪರಿಹರಿಸಬೇಕಾದ ಸಮಸ್ಯೆ ಎಂದು ಅನ್ನಿಸುವುದೇ ಇಲ್ಲ. ಹೊಂದಿಕೊಂಡು ಹೋಗು ಎಂದು ಪರೋಕ್ಷವಾಗಿ ದೌರ್ಜನ್ಯಗಳಿಗೆ ಹೆಣ್ಣಿನ ಪೋಷಕರೂ ಸಮ್ಮತಿಯನ್ನು ನೀಡುತ್ತಾರೆ.

ವಿಪರ್ಯಾಸವೆಂದರೆ, ಸುಶಿಕ್ಷಿತ, ಸ್ವಾವಲಂಬಿ ಹೆಣ್ಣು ಕೂಡ ವರದಕ್ಷಿಣೆ ಕಿರುಕುಳಗಳಿಗೆ ಬಲಿಯಾಗುತ್ತಿರುವುದು. ಇಂದು ಹೆಣ್ಣು ಉದ್ಯೋಗಿಯಾಗಿದ್ದರೂ ಆಕೆಗೆ ಗಂಡನ ಮನೆಯಲ್ಲಿ ಸರಿಯಾದ ಸ್ಥಾನಮಾನ ಸಿಗಬೇಕಾದರೆ ಅದಕ್ಕೆ ಬೇಕಾದ ಶುಲ್ಕವನ್ನು ಪಾವತಿಸಲೇಬೇಕು. ಇಂತಹ ಸಂದರ್ಭದಲ್ಲಿ ಕಠಿಣ ಕಾನೂನುಗಳಿದ್ದರೂ ಅದು ಆಕೆಯ ನೆರವಿಗೆ ಬರುವುದಿಲ್ಲ. ಮೊದಲು ಹೆಣ್ಣಿನ ಕುರಿತಂತೆ ಇರುವ ಮನಸ್ಥಿತಿಯನ್ನು ಸಮಾಜ ಬದಲಿಸಬೇಕಾಗಿದೆ. ಹಾಗೆಯೇ, ಹೆಣ್ಣಿನ ಬದುಕು ಪತಿಯಿಲ್ಲದೆ ಪೂರ್ತಿಯಾಗುವುದಿಲ್ಲ ಎನ್ನುವ ಅಂಶ ಆಕೆಯ ಬ್ಲ್ಯಾಕ್‌ಮೇಲ್‌ಗೆ ಕಾರಣವಾಗಬಾರದು. ಕುಟುಂಬ ಜೀವನದ ಎಲ್ಲ ಮೌಲ್ಯಗಳನ್ನು ಎತ್ತಿ ಹಿಡಿಯಬಲ್ಲವನು, ತನ್ನ ಸಂಗಾತಿಗೆ ಪ್ರತಿ ಹೆಜ್ಜೆ

ಯಲ್ಲೂ ಆತ್ಮವಿಶ್ವಾಸ ತುಂಬಬಲ್ಲವನು ಪತಿ. ಅಂತಹ ಗುಣಗಳು ಆತನಲ್ಲಿಲ್ಲದೆ ಇದ್ದಾಗ, ಆತ ತನ್ನ ಕುಟುಂಬದ ಜೊತೆ ಸೇರಿ ತನ್ನನ್ನು ವರದಕ್ಷಿಣೆಗಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಾನೆ ಎಂದಾಗ ಆತನನ್ನು ತಿರಸ್ಕರಿಸುವ ಎದೆಗಾರಿಕೆ ಮಹಿಳೆಗೂ ಬೇಕಾಗುತ್ತದೆ. ಹೆಣ್ಣಿನ ಪೋಷಕರು ಅಂತಹ ಆತ್ಮವಿಶ್ವಾಸ, ಎದೆಗಾರಿಕೆಯ ಜೊತೆಗೇ ಆಕೆಯನ್ನು ಬೆಳೆಸಬೇಕಾಗುತ್ತದೆ. ಮದುವೆ ಮಾಡಿಕೊಡುವ ಸಂದರ್ಭದಲ್ಲಿ ಪತಿಯ ಮನೆಯಲ್ಲಿ ಹೇಗೆ ಬಾಳಬೇಕು ಎನ್ನುವುದನ್ನು ಹೇಳಿಕೊಟ್ಟ ಹಾಗೆಯೇ, ತನ್ನ ಆತ್ಮಗೌರವಕ್ಕೆ ಕುಂದು ಬಂದಾಗ ಅದನ್ನು ಹೇಗೆ ಪ್ರತಿರೋಧಿಸಿ ನಿಲ್ಲಬೇಕು ಎನ್ನುವುದನ್ನೂ ಕಲಿಸಿಕೊಡಬೇಕು. ಕೊಟ್ಟ ಹೆಣ್ಣು ಕುಲದ ಹೊರಗೆ ಎನ್ನುವ ಮಾತನ್ನು ತಿದ್ದಿ, ನಿನ್ನ ಎಲ್ಲ ನೋವು, ಸಂಕಟಗಳ ಜೊತೆಗೆ ಎಂದೆಂದಿಗೂ ನಾವಿದ್ದೇವೆ ಎನ್ನುವ ಭರವಸೆಯನ್ನು ಆಕೆಯ ಉಡಿಯಲ್ಲಿ ತುಂಬಿ ಆಕೆಯನ್ನು ಕಳುಹಿಸಿ ಕೊಡಬೇಕು. ಪತಿಯ ಕುಟುಂಬದಲ್ಲಿ ವರದಕ್ಷಿಣೆಗಾಗಿ ಮಾನಸಿಕ, ದೈಹಿಕ ಕಿರುಕುಳ ತೀವ್ರವಾದಾಗ, ಅದರ ವಿರುದ್ಧ ಪ್ರತಿಭಟಿಸಿ, ಅವರ ವಿರುದ್ಧ ಈಗಾಗಲೇ ಇರುವ ಕಠಿಣ ಕಾನೂನನ್ನು ಬಳಸಬೇಕು. ಆಗ ಮಾತ್ರ ಹೆಣ್ಣಿನ ಸ್ವಾವಲಂಬಿತನಕ್ಕೆ ಅರ್ಥ ಬರುತ್ತದೆ. ಹೆಣ್ಣಿನ ಕುರಿತಂತೆ ಸಮಾಜಕ್ಕಿರುವ ಮನಸ್ಥಿತಿ ಬದಲಾದಾಗ ಮಾತ್ರ ಕುಟುಂಬ ವ್ಯವಸ್ಥೆಯನ್ನು ಕಿತ್ತುತಿನ್ನುತ್ತಿರುವ ವರದಕ್ಷಿಣೆ ಪಿಡುಗು ಶಾಶ್ವತವಾಗಿ ಅಳಿಯಬಹುದು.

ಬೆಳಗಾವಿಯಲ್ಲಿ ಸಚಿವ ಸ್ಥಾನದ ಲೆಕ್ಕಾಚಾರ ಜೋರು: ಮಂತ್ರಿಗಿರಿ ಯಾರಿಗೆ?

ಒಟ್ಟಿನಲ್ಲಿ ರಾಜ್ಯ ರಾಜಕಾರಣದಲ್ಲಿ ನಡೆಯುತ್ತಿರುವ ಬದಲಾವಣೆಗಳ ನಡುವೆ ಬೆಳಗಾವಿ ಜಿಲ್ಲೆಯಲ್ಲಿ ಮಂತ್ರಿಗಿರಿ ಲೆಕ್ಕಾಚಾರ ಭಾರೀ ಜೋರಾಗಿದ್ದು, ಬೆಳಗಾವಿ ಜಿಲ್ಲೆಗೆ ಈ ಸಲ ಹೆಚ್ಚಿನ ಪ್ರಾತಿನಿಧ್ಯ ಸಿಗಬೇಕು ಎನ್ನವ ಕೂಗು ಕೇಳಿಬರುತ್ತಿದೆ. ಅಶೋಕ ಪಟ್ಟಣ, ಲಕ್ಷ್ಮಣ ಸವದಿ ಸೇರಿದಂತೆ ಜಿಲ್ಲೆಯ ಹಲವು ನಾಯಕರಿಗೆ ಸಚಿವ ಸ್ಥಾನ ಕೊಡಬೇಕು ಎನ್ನುವ ಅಭಿಪ್ರಾಯ ಜನರಲ್ಲೂ ವ್ಯಕ್ತವಾಗುತ್ತಿದೆ. ಇದೀಗ ಕಾಂಗ್ರೆಸ್ ಹೈಕಮಾಂಡ್ ಯಾವ ತೀರ್ಮಾನ ಕೈಗೊಳ್ಳುತ್ತದೆ ಎನ್ನುವುದರ ಮೇಲೆ ಜಿಲ್ಲೆಯ ರಾಜಕೀಯ ಭವಿಷ್ಯ ನಿಂತಿದೆ.



ರಾಜ್ಯ ರಾಜಕಾರಣದಲ್ಲಿ ದೊಡ್ಡ ದೊಡ್ಡ ಬೆಳವಣಿಗೆಗಳು ನಡೆಯುತ್ತಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಿಎಂ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಅವರ ಜಾಗಕ್ಕೆ ಡಿಕೆ ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲಿದ್ದು, ಇದರ ಬೆನ್ನಲ್ಲೇ ಸಚಿವ ಸಂಪುಟ ಪುನರ್ ರಚನೆಯಾಗುವ ಸಾಧ್ಯತೆಗಳಿವೆ. ಈ ಹಿನ್ನೆಲೆಯಲ್ಲಿ ಸಚಿವ ಸಂಪುಟದಲ್ಲಿ ಹೊಸ ಮುಖಗಳಿಗೆ ಮಂತ್ರಿಗಿರಿ ಸಿಗಬಹುದು ಎನ್ನುವ ಮಾತುಗಳು ಕೇಳಿಬರುತ್ತಿವೆ.

ಈ ನಡುವೆ ಬೆಳಗಾವಿ ಜಿಲ್ಲೆಯಿಂದ ಹಲವಾರು ಕಾಂಗ್ರೆಸ್ ಶಾಸಕರು ಮಂತ್ರಿಗಿರಿಯ ಆಕಾಂಕ್ಷಿಗಳಾಗಿದ್ದು, ಮುಖ್ಯವಾಗಿ ರಾಮದುರ್ಗ ಶಾಸಕ ಅಶೋಕ ಪಟ್ಟಣ ಹಾಗೂ ಅಥಣಿ ಶಾಸಕ ಲಕ್ಷ್ಮಣ ಸವದಿ ಅವರ ಹೆಸರುಗಳು ಮುಂಚೂಣಿಯಲ್ಲಿ ಕೇಳಿಬರುತ್ತಿವೆ.

ರಾಮದುರ್ಗ ಶಾಸಕ ಅಶೋಕ ಪಟ್ಟಣ ಅವರು ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಸಿದ್ದರಾಮಯ್ಯ ಅವರ ಆಪ್ತ ನಾಯಕರಲ್ಲಿ ಒಬ್ಬರಾಗಿ ಗುರುತಿಸಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷದ ಹಿರಿಯ ರಾಜಕೀಯ ಕುಟುಂಬದಿಂದ ಬಂದಿರುವ ಅವರು ಇತ್ತೀಚಿಗಷ್ಟೇ ದೆಹಲಿಗೆ ಹೋಗಿ ಕಾಂಗ್ರೆಸ್ ಹೈಕಮಾಂಡ್ ಭೇಟಿ ಮಾಡಿ ಬಂದಿದ್ದಾರೆ. ಜತೆಗೆ ರಾಮದುರ್ಗ ಭಾಗಕ್ಕೆ ಹಲವಾರು ವರ್ಷಗಳಿಂದ ಸಚಿವ ಸ್ಥಾನ ಸಿಕ್ಕಿಲ್ಲ ಎನ್ನುವ ಕಾರಣಕ್ಕೂ ಈ ಬಾರಿ ಅವಕಾಶ ಸಿಗಬಹುದು ಎನ್ನುವ ಮಾತು ಜೋರಾಗಿದೆ. ರೈತರಿಗಾಗಿ ನೀರಾವರಿ ಯೋಜನೆ, ಗ್ರಾಮೀಣ ರಸ್ತೆ, ಶಿಕ್ಷಣ ವಿಷಯದಲ್ಲಿ ಅಶೋಕ ಪಟ್ಟಣ ಅವರು ಕೆಲಸ ಮಾಡಿದ್ದಾರೆ ಎನ್ನುವ ಅಭಿಪ್ರಾಯವೂ ಜನರಲ್ಲಿ ಇದೆ.

ಇನ್ನೊಂದೆಡೆ ಮಾಜಿ ಉಪಮುಖ್ಯಮಂತ್ರಿಯಾಗಿದ್ದ ಲಕ್ಷ್ಮಣ ಸವದಿ ಅವರು ಬಿಜೆಪಿಯಿಂದ ಕಾಂಗ್ರೆಸ್ ಪಕ್ಷಕ್ಕೆ ಬಂದು ಮತ್ತೆ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಉತ್ತರ ಕರ್ನಾಟಕ ಭಾಗದಲ್ಲಿ ಪ್ರಭಾವಿ ನಾಯಕ ಎನಿಸಿಕೊಂಡಿರುವ ಅವರು ಕುಡಚಿ, ಕಾಗವಾಡ ಹಾಗೂ ಅಥಣಿ ಭಾಗದ ಚುನಾವಣಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎನ್ನಲಾಗುತ್ತಿದೆ. ಸಚಿವ ಸತೀಶ ಜಾರಕಿಹೊಳಿ ಅವರಿಂದ ಇವರಿಗೆ ಅಡ್ಡಿಯಾಗಬಹುದು ಎನ್ನುವ ಚರ್ಚೆಗಳಿದ್ದರೂ, ಸವದಿ ಅವರ ರಾಜಕೀಯ ಪ್ರಭಾವದಿಂದ ಮಂತ್ರಿಗಿರಿ ಸಿಗುವ ಸಾಧ್ಯತೆ ಇದೆ ಎನ್ನುವ ಮಾತು ರಾಜಕೀಯ ವಲಯದಲ್ಲಿ ಮಾತು ಕೇಳಿಬರುತ್ತಿವೆ.

ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ ಅವರು ಕೂಡ ಮಂತ್ರಿಗಿರಿಯ ನಿರೀಕ್ಷೆಯಲ್ಲಿದ್ದಾರೆ. ಮೂರು ಸಲ ಶಾಸಕರಾಗಿರುವ ಅವರು ಪಕ್ಷ ಸಂಘಟನೆಯಲ್ಲಿ ಸಕ್ರಿಯರಾಗಿದ್ದು, ಈ ಸಲ ಅವಕಾಶ ಕೊಡಬೇಕೆಂದು ಅವರ ಬೆಂಬಲಿಗರು ಒತ್ತಾಯ ಮಾಡುತ್ತಿದ್ದಾರೆ. ಅದೇ ರೀತಿ ಬೆಳಗಾವಿ ಉತ್ತರ ಕ್ಷೇತ್ರದ ಶಾಸಕ ಆಸಿಫ್ ಸೇಠ್ ಅವರು ಅಲ್ಪಸಂಖ್ಯಾತ ಕೋಟಾದಲ್ಲಿ ಸಚಿವ ಸ್ಥಾನ ಕೊಡಬೇಕೆಂದು ಬೇಡಿಕೆ ಇಟ್ಟಿದ್ದಾರೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ಸಚಿವ ಸ್ಥಾನ ಉಳಿಯುತ್ತದೆಯೇ ಎನ್ನುವ ಪ್ರಶ್ನೆಯೂ ಕೂಡ ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿದೆ. ಆದರೆ ಅವರು ಡಿಕೆ ಶಿವಕುಮಾರ್ ಬಣದಲ್ಲಿ ಗುರುತಿಸಿಕೊಂಡಿರುವುದರಿಂದ ಸ್ಥಾನ ಉಳಿಯುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ ಪ್ರಭಾವಿ ಮಹಿಳಾ ನಾಯಕಿಯಾಗಿ ಬೆಳೆದಿರುವ ಲಕ್ಷ್ಮೀ ಹೆಬ್ಬಾಳಕರ್ ಅವರಿಗೆ ಮತ್ತೆ ಪ್ರಮುಖ ಖಾತೆ ಸಿಗಬಹುದು ಎನ್ನುವ ಚರ್ಚೆಯೂ ಇದೆ.

ಇದರ ಜತೆಗೆ ಸಚಿವ ಸತೀಶ ಜಾರಕಿಹೊಳಿ ಅವರಿಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಸಿಗುವ ಸಾಧ್ಯತೆಗಳ ಕುರಿತೂ ಮಾತುಗಳು ಜೋರಾಗಿವೆ. ಕಾಂಗ್ರೆಸ್ ಪಕ್ಷದ ''ಒಬ್ಬರಿಗೆ ಒಂದೇ ಹುದ್ದೆ'' ನಿಯಮದ ಪ್ರಕಾರ ಕೆಪಿಸಿಸಿ ಅಧ್ಯಕ್ಷ ಸ್ಥಾನ ಸಿಕ್ಕರೆ ಸಚಿವ ಸ್ಥಾನ ಬಿಟ್ಟುಕೊಡಬೇಕಾಗಬಹುದು. ಆದರೂ ಅವರು ಪ್ರಭಾವಿ ನಾಯಕರು ಹಾಗೂ ಸಿದ್ದರಾಮಯ್ಯ ಅವರ ಆಪ್ತರಾಗಿರುವುದರಿಂದ ಎರಡೂ ಹುದ್ದೆ ಉಳಿಸಿಕೊಳ್ಳುವ ಸಾಧ್ಯತೆ ಇದೆ ಎಂತಲೂ ಹೇಳಲಾಗುತ್ತಿದೆ.



ಬೆಳಗಾವಿ ಜಿಲ್ಲೆಗೆ ಈ ಸಲ ಹೆಚ್ಚು ಪ್ರಾತಿನಿಧ್ಯ ಕೊಡಬೇಕು ಎನ್ನುವ ಒತ್ತಾಯ ಕಾಂಗ್ರೆಸ್ ಕಾರ್ಯಕರ್ತರ ವಲಯದಲ್ಲೂ ಜೋರಾಗಿದೆ. ವಿಶೇಷವಾಗಿ ಬೆಳಗಾವಿ ಜಿಲ್ಲೆ ರಾಜ್ಯ ರಾಜಕಾರಣದಲ್ಲಿ ದೊಡ್ಡ ಪಾತ್ರ ವಹಿಸುತ್ತಿರುವುದರಿಂದ ಈ ಭಾಗದ ನಾಲ್ಕರಿಂದ ಐದು ಶಾಸಕರಿಗೆ ಮಂತ್ರಿಗಿರಿ ಸಿಗಬೇಕು ಎನ್ನುವ ಮಾತು ಕೇಳಿಬರುತ್ತಿವೆ.


ಈ ಕುರಿತು ರೈತ ಶಿವಪ್ಪ ಮಾತನಾಡಿ, ''ರಾಮದುರ್ಗ ಕ್ಷೇತ್ರಕ್ಕೆ ತುಂಬಾ ವರ್ಷಗಳಿಂದ ಸಚಿವ ಸ್ಥಾನ ಸಿಕ್ಕಿಲ್ಲ ರೀ. ಅಶೋಕ ಪಟ್ಟಣ ಅವರು ಕ್ಷೇತ್ರದ ಜನರ ಸಮಸ್ಯೆಗಾಗಿ ಸದಾ ಹೋರಾಟ ಮಾಡ್ತಾರ. ತಾಲೂಕಿಗೆ ಎರಡು ದೊಡ್ಡ ನೀರಾವರಿ ಯೋಜನೆ ತಂದು ರೈತರಿಗೆ ಅನುಕೂಲ ಮಾಡಿಕೊಟ್ಟಾರ. ಬಡವರು, ರೈತರ ಪರ ಧ್ವನಿ ಎತ್ತಾಕತ್ತಾರ. ಈ ಸಲ ನಮ್ಮ ರಾಮದುರ್ಗ ಭಾಗಕ್ಕೆ ನ್ಯಾಯ ಸಿಗಬೇಕಂದ್ರ, ಅಶೋಕ ಪಟ್ಟಣ ಅವರಿಗೆ ಮಂತ್ರಿಗಿರಿ ಕೊಡಬೇಕು'' ಎಂದು ಹೇಳಿದರು.

ಈ ಕುರಿತು ಅಥಣಿಯ ವ್ಯಾಪಾರಿ ಸಿದ್ಧಾರ್ಥ ಅಂಗಡಿ ಈ ದಿನ.ಕಾಮ್ ಜತೆ ಮಾತನಾಡಿ, ''ಲಕ್ಷ್ಮಣ ಸವದಿ ಅವರು ಉತ್ತರ ಕರ್ನಾಟಕದ ಪ್ರಭಾವಿ ರಾಜಕಾರಣಿ ರೀ. ಬಿಜೆಪಿಯಲ್ಲಿ ಇದ್ದಾಗ ಉಪಮುಖ್ಯಮಂತ್ರಿಯಾಗಿಯೂ ಕೆಲಸ ಮಾಡಿದ್ದಾರ. ಇಷ್ಟು ದೊಡ್ಡ ನಾಯಕ ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ರಿಂದ ಪಕ್ಷಕ್ಕೂ ತುಂಬಾ ಅನುಕೂಲ ಆಗಿದೆ. ಅಥಣಿ ಭಾಗದ ಅಭಿವೃದ್ಧಿಗೆ ಅವರು ಸಾಕಷ್ಟು ಕೆಲಸ ಮಾಡ್ತಾರ. ಈ ಸಲ ಲಕ್ಷ್ಮಣ ಸವದಿ ಅವರಿಗೆ ಮಂತ್ರಿಗಿರಿ ಕೊಟ್ಟರೆ ಉತ್ತರ ಕರ್ನಾಟಕಕ್ಕೂ ಶಕ್ತಿ ಬರುತ್ತೆ'' ಎಂದರು.

ಒಟ್ಟಿನಲ್ಲಿ ರಾಜ್ಯ ರಾಜಕಾರಣದಲ್ಲಿ ನಡೆಯುತ್ತಿರುವ ಬದಲಾವಣೆಗಳ ನಡುವೆ ಬೆಳಗಾವಿ ಜಿಲ್ಲೆಯಲ್ಲಿ ಮಂತ್ರಿಗಿರಿ ಲೆಕ್ಕಾಚಾರ ಭಾರೀ ಜೋರಾಗಿದ್ದು, ಬೆಳಗಾವಿ ಜಿಲ್ಲೆಗೆ ಈ ಸಲ ಹೆಚ್ಚಿನ ಪ್ರಾತಿನಿಧ್ಯ ಸಿಗಬೇಕು ಎನ್ನವ ಕೂಗು ಕೇಳಿಬರುತ್ತಿದೆ. ಅಶೋಕ ಪಟ್ಟಣ, ಲಕ್ಷ್ಮಣ ಸವದಿ ಸೇರಿದಂತೆ ಜಿಲ್ಲೆಯ ಹಲವು ನಾಯಕರಿಗೆ ಸಚಿವ ಸ್ಥಾನ ಕೊಡಬೇಕು ಎನ್ನುವ ಅಭಿಪ್ರಾಯ ಜನರಲ್ಲೂ ವ್ಯಕ್ತವಾಗುತ್ತಿದೆ. ಇದೀಗ ಕಾಂಗ್ರೆಸ್ ಹೈಕಮಾಂಡ್ ಯಾವ ತೀರ್ಮಾನ ಕೈಗೊಳ್ಳುತ್ತದೆ ಎನ್ನುವುದರ ಮೇಲೆ ಜಿಲ್ಲೆಯ ರಾಜಕೀಯ ಭವಿಷ್ಯ ನಿಂತಿದೆ.

ಜನಾಕ್ರೋಶದ ಅಂಡರ್‌ಕವರ್ ಏಜೆಂಟ್ ಮಿ.ಜಿರಳೆ: 'ಕಾಕ್ರೋಚ್ ಪಾರ್ಟಿ' ಅಂದ್ರೆ ತಮಾಷೆನೇ ಅಲ್ಲ!

ಸರ್ಕಾರ ಇಂತಹ ಮೀಮ್ ಕ್ರಾಂತಿಗಳನ್ನು ಸುಮ್ಮನೆ ಬಿಟ್ಟರೆ ಅಥವಾ ಇದಕ್ಕೆ ಸಮ್ಮತಿ ಕೊಟ್ಟರೆ ತಾನು ದುರ್ಬಲ ಎಂದು ಒಪ್ಪಿಕೊಂಡಂತಾಗುತ್ತದೆ, ಒಂದು ವೇಳೆ ಇಂಟರ್ನೆಟ್ ಟ್ರೋಲ್ ಪಡೆಗಳನ್ನು ಬಳಸಿ ಅದನ್ನು ನಿಷೇಧಿಸಲು ಹೋದರೆ ಸಾರ್ವಜನಿಕರ ಕಣ್ಣಿಗೆ ಹಾಸ್ಯಾಸ್ಪದವಾಗಿ ಕಾಣುತ್ತದೆ. ಪ್ರಾಯಶಃ ತಿಳಿಯದೆಯೇ, ಇಂತಹದೊಂದು ಡಿಲೆಮಾ ಆಕ್ಷನ್ ಮಾದರಿಯನ್ನು ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಹೋರಾಡುವವರಿಗೆ ಉಡುಗೊರೆಯಾಗಿ ನೀಡಿದೆ ಎನಿಸುತ್ತದೆ.



ರಾಜಕೀಯ ವಿಶ್ಲೇಷಕರು ಕಾಕ್ರೋಚ್ ಜನತಾ ಪಾರ್ಟಿ () ಯನ್ನು ಸಾಮಾನ್ಯ ರಾಜಕೀಯ ದೃಷ್ಟಿಕೋನದಿಂದಲೇ ನೋಡುತ್ತಾ ಅದರ ಲಾಭ-ನಷ್ಟದ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ. ಅವರೆಲ್ಲ ಎಂಬುದು ನೋಂದಾಯಿತ ರಾಜಕೀಯ ಪಕ್ಷವೇ ಅಲ್ಲ, ಅದೊಂದು ವ್ಯವಸ್ಥಿತ ಸೈದ್ಧಾಂತಿಕ ಚಳವಳಿಯೂ ಅಲ್ಲ. ಇದೊಂದು ಅಲೆಯೇ ಹೊರತು ಸುನಾಮಿಯಲ್ಲ. ಅದು ಪ್ರಸ್ತುತ ವ್ಯವಸ್ಥೆಯ ವಿರುದ್ಧ ಸಾರ್ವಜನಿಕರಲ್ಲಿ, ವಿಶೇಷವಾಗಿ ಯುವಜನರಲ್ಲಿ ಮೂಡಿರುವ ಆಕ್ರೋಶದ ಸ್ಫೋಟವಷ್ಟೇ ಎನ್ನುವುದನ್ನು ಮರೆತಂತಿದೆ.

ಇತಿಹಾಸದಲ್ಲಿ ಪ್ರಬಲ ಬಹುಮತ ಹೊಂದಿರುವ ಸರ್ಕಾರಗಳು ತಮ್ಮ ಆಡಳಿತದ ಮಧ್ಯಾವಧಿಗೆ ಬಂದಾಗ ಇಂತಹ ದಿಢೀರ್ ಆಂದೋಲನಗಳನ್ನು ಎದುರಿಸಿವೆ. ಅಂದರೆ, ಎಲ್ಲಿಂದಲೋ ಹುಟ್ಟಿಕೊಂಡ ಪ್ರತಿಭಟನಾ ಆಂದೋಲನಗಳು ಅಧಿಕಾರದ ಕರಾಳ ಮುಖವನ್ನು ಜಗತ್ತಿನ ಮುಂದೆ ತೆರೆದಿಟ್ಟ ಸಂದರ್ಭಗಳಂತೆ ಭಾಸವಾಗುತ್ತದೆ. 1973-74ರ ಗುಜರಾತ್ ಮತ್ತು ಬಿಹಾರ ಚಳವಳಿಗಳು, 1983ರ ಅಸ್ಸಾಂ ಚಳವಳಿ, 2012ರ ಅಣ್ಣಾ ಆಂದೋಲನ ಮತ್ತು 2021ರ ಬೃಹತ್ ರೈತ ಚಳವಳಿಗಳಂತೆ, ಪ್ರಸ್ತುತ ಸರ್ಕಾರದ ತೀವ್ರ ನಿಯಂತ್ರಣದ ನಡುವೆಯೂ ಈ ಆಡಳಿತದ ಮೇಲಿರುವ ಅಸಮಾಧಾನವನ್ನು ಹೊರಹಾಕುತ್ತಿದೆ. ಬಿಜೆಪಿ 2024ರಲ್ಲಿ ಹೇಗೋ ಮುಗ್ಗರಿಸಿ ಅಧಿಕಾರಕ್ಕೆ ಬಂದಿತಾದರೂ, ಕಳೆದ ಒಂದು ದಶಕದ ಕಾಲ ಇದ್ದ ಪ್ರಾಬಲ್ಯ ಅಥವಾ ಸಾರ್ವಜನಿಕ ನಂಬಿಕೆಯನ್ನು ಉಳಿಸಿಕೊಳ್ಳಲು ಅದಕ್ಕೆ ಸಾಧ್ಯವಾಗಲಿಲ್ಲ. ಇತ್ತೀಚಿನ ಬಂಗಾಳ ಚುನಾವಣೆ ನಂತರ ಸರ್ಕಾರ ತನ್ನ ಪಾರುಪತ್ಯವನ್ನು ಮರಳಿ ಸ್ಥಾಪಿಸಿಕೊಂಡಿದ್ದೇನೆಂದು ಬೀಗುತ್ತಿರುವಾಗಲೇ, ಪರೀಕ್ಷಾ ಅಕ್ರಮ, ಮತ್ತು ಸಿಜೆಐ () ಅವರ ಅವಲೋಕನಗಳು ಎದುರುಗೊಂಡು ಯುವ ಜನರ ಆಕ್ರೋಶದ ಕಟ್ಟೆ ಒಡೆಯುತ್ತಿದೆ. ಈ ಪ್ರಕರಣಗಳು ಆ ಕ್ಷಣದ ನೆಪವಾಗಿವೆಯಷ್ಟೆ, ನಿಜವಾದ ಕಾರಣ ಬೇರೆಯದೇ.

ಈ ವಿದ್ಯಮಾನದ ಅತ್ಯಂತ ವಿಶೇಷ ಅಂಶವೆಂದರೆ ಅದು ಆಡಳಿತಗಾರರನ್ನು ಇಕ್ಕಟ್ಟಿಗೆ ಸಿಲುಕಿಸಲು ಬಳಸುತ್ತಿರುವ ಡಿಲೆಮಾ ಆಕ್ಷನ್ ( ) ಎಂಬ ತಂತ್ರ. ಜಿರಳೆಯ () ಮೀಮ್ ಬಳಸಿ ಇಡೀ ವ್ಯವಸ್ಥೆಯನ್ನು ಅಣಕಿಸುವ ಈ ಪ್ರವೃತ್ತಿ ಸರ್ವಾಧಿಕಾರಿ ಧೋರಣೆಯ ಸರ್ಕಾರಕ್ಕೆ ದೊಡ್ಡ ತಲೆನೋವಾಗಿದೆ. ಸರ್ಕಾರ ಇಂತಹ ಮೀಮ್‌ಗಳನ್ನು ಸುಮ್ಮನೆ ಬಿಟ್ಟರೆ ಅಥವಾ ಇದಕ್ಕೆ ಸಮ್ಮತಿ ಕೊಟ್ಟರೆ ತಾನು ದುರ್ಬಲ ಎಂದು ಒಪ್ಪಿಕೊಂಡಂತಾಗುತ್ತದೆ, ಅದೇ ಒಂದು ವೇಳೆ ಇಂಟರ್ನೆಟ್ ಟ್ರೋಲ್ ಪಡೆಗಳನ್ನು ಬಳಸಿ ಅದನ್ನು ನಿಷೇಧಿಸಲು ಹೋದರೆ ಸಾರ್ವಜನಿಕರ ಕಣ್ಣಿಗೆ ಕ್ರೂರವಾಗಿ ಹಾಗೂ ಹಾಸ್ಯಾಸ್ಪದವಾಗಿ ಕಾಣುತ್ತದೆ. ಪ್ರಾಯಶಃ ತಿಳಿಯದೆಯೇ, ಇಂತಹದೊಂದು ಡಿಲೆಮಾ ಆಕ್ಷನ್ ಮಾದರಿಯನ್ನು ಪ್ರಜಾಪ್ರಭುತ್ವದ ಮರುಸ್ಥಾಪನೆಗಾಗಿ ಹೋರಾಡುವವರಿಗೆ ಉಡುಗೊರೆಯಾಗಿ ನೀಡಿದೆ ಎನಿಸುತ್ತದೆ.

ಅಧಿಕಾರಸ್ಥರು ಚುನಾವಣಾ ಯಶಸ್ಸಿನ ಸುತ್ತ ಎಷ್ಟೇ ಡೋಲು ಬಾರಿಸಿದರೂ, ಸಾರ್ವಜನಿಕರಲ್ಲಿ, ವಿಶೇಷವಾಗಿ ಯುವಜನರಲ್ಲಿ ಹೆಚ್ಚುತ್ತಿರುವ ಆತಂಕ ಮತ್ತು ಸಂಕಟವನ್ನು ಮರೆಮಾಚಲು ಸಾಧ್ಯವಿಲ್ಲ. ಸರ್ವಶಕ್ತವಾದ ಆಡಳಿತವೊಂದು ಒಂದು ಸಣ್ಣ ಮೀಮ್ ಅನ್ನು ನಿಷೇಧಿಸಲು ರಾಷ್ಟ್ರೀಯ ಭದ್ರತೆಯನ್ನು ಉಲ್ಲೇಖಿಸಬೇಕಾಗಿ ಬಂದರೆ ಮತ್ತು ಸೋಷಿಯಲ್ ಮೀಡಿಯಾ ಟ್ರೆಂಡ್ ಅನ್ನು ಅಪಖ್ಯಾತಿಗೊಳಿಸಲು ತನ್ನ ಟ್ರೋಲ್ ಸೈನ್ಯವನ್ನು ನಿಯೋಜಿಸಬೇಕಾಗಿ ಬಂದರೆ, ಅದು ಒಳಗಿನಿಂದ ತುಂಬಾ ದುರ್ಬಲವಾಗಿದೆ ಎಂದೇ ಅರ್ಥ. ಅದರ ವಿಜಯಗಳು ಎಷ್ಟು ಹೆಚ್ಚುತ್ತವೆಯೋ, ಅದು ಅಷ್ಟೇ ಬೇಗನೆ ಪತನದ ಅಂಚಿಗೆ ತಲುಪುತ್ತದೆ. ವಿರೋಧ ಪಕ್ಷಗಳು ಈ ಜವಾಬ್ದಾರಿಯನ್ನು ಹೊರಲು ಪೂರ್ಣವಾಗಿ ಸಿದ್ಧವಾಗಿಲ್ಲ. ಯ ಸುಮಾರು 2.3 ಕೋಟಿ ಅನುಯಾಯಿಗಳು ಎಲ್ಲಾ ವಿರೋಧ ಪಕ್ಷಗಳಿಗೆ ''ನೀವು ಮೊದಲು ನಿಮ್ಮ ನಡವಳಿಕೆಯನ್ನು ಸರಿಪಡಿಸಿಕೊಳ್ಳಿ ಮತ್ತು ಒಟ್ಟಾಗಿ ಕೆಲಸ ಮಾಡಿ'' ಎನ್ನುವ ಸಂದೇಶವನ್ನಂತೂ ನೀಡಿದ್ದಾರೆ.

ಹಾಗಾಗಿ ನಾವು ಕಾಕ್ರೋಚ್ ಜನತಾ ಪಾರ್ಟಿಗೆ ಪ್ರತಿಕ್ರಿಯಿಸಲು ಹೊಸ ಮಾರ್ಗ ಕಂಡುಕೊಳ್ಳಬೇಕಾಗಿದೆ. ಎಂದಿನ ರಾಜಕೀಯ ಸಿನಿಕತನ ಅಥವಾ ರಾಜಕೀಯವಾಗಿ ಬಳಸಿಕೊಳ್ಳುವ ಆಲೋಚನೆಗಳಿಂದ ದೂರವಿರಬೇಕಿದೆ. ಇದನ್ನ ಅರ್ಥ ಮಾಡಿಕೊಳ್ಳಲು ವಿನೋದ್ ಕುಮಾರ್ ಶುಕ್ಲಾ ಅವರ ಕವಿತೆಯೊಂದ ಗುನುಗಿದರೆ ಆಗಬಹುದೇನೋ. ಕವಿತೆಯ ಅರ್ಥ ಹೀಗಿದೆ ''ಈ ಕಠಿಣ ದಿನಗಳಲ್ಲಿ ನಾವೆಲ್ಲರೂ ಪರಸ್ಪರ ಪರಿಚಯವಿಲ್ಲದ ಅಪರಿಚಿತರಾಗಿದ್ದರೂ, ನಮ್ಮ ದೌರ್ಬಲ್ಯ ಮತ್ತು ಕಾಳಜಿಯ ಆಧಾರದ ಮೇಲೆ ಒಬ್ಬರಿಗೊಬ್ಬರು ಕೈಹಿಡಿದು ಜೊತೆಯಾಗಿ ನಡೆಯುವ ಹೊಸ ರಾಜಕೀಯ ಒಗ್ಗಟ್ಟನ್ನು ರೂಪಿಸಿಕೊಳ್ಳಬೇಕಾದ ಅಗತ್ಯವಿದೆ.''

ಸಾಮಾಜಿಕ ಜಾಲತಾಣಗಳಲ್ಲಿ ಲಕ್ಷಾಂತರ ಜನ ಸೇರಿ ಈಗಾಗಲೇ ಸೆಟ್ ಆಗಿರುವ ಒಂದು ಟ್ರೆಂಡ್ ಅನ್ನು ಬೆಂಬಲಿಸುವುದು ಸುಲಭ (ಇದನ್ನು ಡಿಜಿಟಲ್ ಜಗತ್ತಿನಲ್ಲಿ ಎನ್ನಲಾಗುತ್ತದೆ). ಆದರೆ, ಈ ವರ್ಚುವಲ್ ಆಕ್ರೋಶ ನೆಲದ ಮೇಲಿನ ನೈಜ ಹೋರಾಟವಾಗಿ ರೂಪಾಂತರಗೊಳ್ಳದಿದ್ದರೆ, ಅದು ತಾತ್ಕಾಲಿಕವಾಗುತ್ತದೆ. ಹೀಗೆ ಬಂದು ಹಾಗೆ ಹೋಗುವ ಹಿಮದಂತೆ ಕರಗಿಹೋಗುತ್ತದೆ. ಯುವ ಪೀಳಿಗೆ ಇಂಟರ್ನೆಟ್‌ನಲ್ಲಿ ಆಕ್ರೋಶ ವ್ಯಕ್ತಪಡಿಸುವುದನ್ನು ನಿಲ್ಲಿಸಿ, ಅದನ್ನು ವ್ಯವಸ್ಥಿತ ರಾಜಕೀಯ ಬದಲಾವಣೆಯನ್ನಾಗಿ ಮಾಡದ ಹೊರತು ದೇಶದ ಚುನಾವಣೆ, ಆಡಳಿತ ವೈಖರಿ ಹಾಗೂ ವ್ಯವಸ್ಥೆಯ ಚಿತ್ರಣ ಬದಲಾಗುವುದಿಲ್ಲ.

ಇತಿಹಾಸದುದ್ದಕ್ಕೂ ರಾಜಪ್ರಭುತ್ವ ಮತ್ತು ಸರ್ವಾಧಿಕಾರವನ್ನು ಅಲುಗಾಡಿಸಲು ವ್ಯಂಗ್ಯ ಮತ್ತು ಹಾಸ್ಯ ಪ್ರಮುಖ ಪಾತ್ರ ವಹಿಸಿವೆ. ಗಂಭೀರವಾದ ರಾಜಕೀಯ ಭಾಷಣಗಳು ಮಾಡಲಾಗದ ಕೆಲಸವನ್ನು ಒಂದು ಸಣ್ಣ ಮೀಮ್ ಮಾಡಬಲ್ಲದು, ಏಕೆಂದರೆ ಅದು ಪ್ರಭುತ್ವದ ಮೇಲಿರುವ ಭಯವನ್ನು ಸಾರ್ವಜನಿಕರ ಮನಸ್ಸಿನಿಂದ ಕಿತ್ತೊಗೆಯುತ್ತದೆ. ಸಾರ್ವಜನಿಕರಲ್ಲಿ ಭಯ ಕಡಿಮೆಯಾದಾಗ, ಆಳುವವರ ಅಹಂಕಾರ ಮತ್ತು ಸರ್ವಾಧಿಕಾರಿ ಧೋರಣೆಗಳು ತಾನಾಗಿಯೇ ಕುಸಿಯತೊಡಗುತ್ತವೆ ಎಂಬುದಕ್ಕೆ ಈ ಕ್ರಾಂತಿಯೇ ಉತ್ತಮ ಉದಾಹರಣೆ.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR